ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹಾಗು ಶ್ರೀಮತಿ ಚನ್ನಮ್ಮ ಅವರ ಅಪರೂಪದ ಭಾವಚಿತ್ರ...



20 ಜುಲೈ, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ :129 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

# ಶ್ರದ್ಧಾಂಜಲಿ

ಆಸ್ತಾಂ ತಾವದಿಯಂ ಪ್ರಸೂತಿ ಸಮಯೇ ದುರ್ವಾರಶೂಲವ್ಯಥಾ
ನೈರುಜ್ಯಂ ತನುಶೋಷಣಂ ಮಲಮಯೀ ಶಯ್ಯಾ ಚ ಸಾಂವತ್ಸರೀ ।
ಏಕಸ್ಯಾಪಿ ನ ಗರ್ಭಭಾರಭರಣ ಕ್ಲೇಶಸ್ಯ ಯಸ್ಯ ಕ್ಷಮಃ
ದಾತುಂ ನಿಷ್ಕೃತಿಮುನ್ನತೋಽಮಪಿ ತನಯಸ್ತಸ್ಯೈ ಜನನ್ಯೈ ನಮಃ ॥
–ಶ್ರೀ ಆದಿಶಂಕರಾಚಾರ್ಯರು

**ತಾತ್ಪರ್ಯ :**
ತಾಯಿಯು ಮಗುವನ್ನು ಹೆರುವಾಗ ಪಡುವ ಯಾತನೆಯು ಅಸಹನೀಯ. ಅವಳು ಮಗುವಿನ ಪೋಷಣೆಯಲ್ಲಿ ಅನಾರೋಗ್ಯಕ್ಕೆ ಈಡಾಗುವುದು, ಮಗುವಿನ ಮಲಮೂತ್ರಾದಿಗಳನ್ನು ಬಳಿದು ಹಾಕುವುದು, ವರ್ಷಾನುಕಾಲ ಉಣ್ಣುವ ಕಷ್ಟಗಳನ್ನು ನೆನಪಿಸಿಕೊಂಡರೆ, ಆಕೆಯ ಋಣವನ್ನು ತೀರಿಸಲು ಈ ಜನ್ಮ ಸಾಲದು.



## ಅನ್ನಪೂರ್ಣೇಶ್ವರಿ

## ಶ್ರೀಮತಿ ಚನ್ನಮ್ಮ ದೇವೇಗೌಡ ರವರು

**(ಜನನ: ಜೂನ್ 1937 । ಮರಣ: 18 ಜುಲೈ 2026)**

ಸಹೋದರಿ, ಧರ್ಮಪತ್ನಿ, ತಾಯಿಯಾಗಿ ಎಲ್ಲಾ ಜವಾಬ್ದಾರಿಗಳನ್ನು ಸಾರ್ಥಕವಾಗಿ ಪೂರೈಸಿದ ನೀವು ಮಮತಾಮಯಿ, ಕರುಣಾಮಯಿ ಆಗಿದ್ದಿರಿ. ಮನೆ ಬಾಗಿಲಿಗೆ ಬಂದವರನ್ನು ಮಕ್ಕಳಂತೆ ಸಲುಹಿದ ಮಹಾತಾಯಿ.
ಇಡೀ ಬದುಕನ್ನು ನಿಸ್ವಾರ್ಥವಾಗಿ ಸವೆಸಿ ಶಿವೈಕ್ಯರಾದ ನಿಮ್ಮ ಅಗಲಿಕೆ ನಮಗೆಲ್ಲರಿಗೂ ಅತೀವ ದುಃಖ ಉಂಟು ಮಾಡಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಆ ಭಗವಂತನಲ್ಲಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

LOCATION QR CODE

**ಅಂತ್ಯಕ್ರಿಯೆ:**
**ದಿನಾಂಕ:** 20-07-2026, ಸೋಮವಾರ
ಮಧ್ಯಾಹ್ನ 2:00 ರಿಂದ ಸಂಜೆ 4:15 ಗಂಟೆವರೆಗೆ
**ಸ್ಥಳ:** ಮಾವಿನಕೆರೆ ಶ್ರೀ ರಂಗನಾಥಸ್ವಾಮಿ ಬೆಟ್ಟದ ತಪ್ಪಲು

**ಇಂತಿ ದುಃಖತಪ್ತರು**
ಶ್ರೀ ಹೆಚ್.ಡಿ. ದೇವೇಗೌಡರ ಕುಟುಂಬ ಮತ್ತು ಅಭಿಮಾನಿಗಳು

CMYK CMYK CMYK CMYK

ಜನಮನದ ದನಿ
# ಪ್ರಜೋದಯ
ಸಂಪಾದಕ : ಜೆ.ಆರ್. ಕೆಂಚೇಗೌಡ

20 ಜುಲೈ, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ :129 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



# ಇಂದು ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿ ಚನ್ನಮ್ಮ ಅಂತ್ಯಕ್ರಿಯೆ







**ಕಣ್ಣೀರಧಾರೆ...**
ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಪಾರ್ಥಿವ ಶರೀರವನ್ನು ಚನ್ನರಾಯಪಟ್ಟಣದಲ್ಲಿ ಕಣ್ಣೀರಧಾರೆಯೊಂದಿಗೆ ಸಾರ್ವಜನಿಕರು ಬರಮಾಡಿಕೊಂಡರು. ಪುತ್ರರಾದ ಹೆಚ್.ಡಿ.ಕುಮಾರಸ್ವಾಮಿ, ಬಾಲಕೃಷ್ಣ, ಪುತ್ರಿ ಅನುಸೂಯ ಮತ್ತಿತರರಿದ್ದರು.

• ಪ್ರಜೋದಯ ವರದಿ

**ಹೊಳೆನರಸೀಪುರ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ (85)ಅವರ ಅಂತ್ಯಕ್ರಿಯೆಗೆ ತಾಲ್ಲೂಕಿನ ಮಾವಿನಕೆರೆ ಬೆಟ್ಟದ ಶ್ರೀ ರಂಗನಾಥ ಸ್ವಾಮಿ ತಪ್ಪಲಿನಲ್ಲಿ ಅಂತಿಮ ಸಿದ್ಧತೆ ಕೈಗೊಳ್ಳಲಾಗಿದೆ. ಸಕಲ ಸರ್ಕಾರಿ ಗೌರವಗಳೊಂದಿಗೆ ಸೋಮವಾರ ಸಂಜೆ 4 ಗಂಟೆಗೆ ಒಕ್ಕಲಿಗರ ಸಂಪ್ರದಾಯದಂತೆ ಚನ್ನಮ್ಮ ಅವರ ಅಂತಿಮ ಸಂಸ್ಕಾರ ನೆರವೇರಲಿದೆ. ಭಾನುವಾರ ಬೆಳಿಗ್ಗೆಯಿಂದಲೇ ಎಲ್ಲಾ ಸಿದ್ಧತೆಗಳು ಪ್ರಾರಂಭಗೊಂಡವು. ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಪತ್ನಿ ಭವಾನಿ ರೇವಣ್ಣ ಸೇರಿ ಜೆಡಿಎಸ್‌ನ ಮುಖಂಡರು, ಶಾಸಕರು, ಸಂಸದ ಶ್ರೇಯಸ್ ಪಟೇಲ್ ಹಾಗು ಜಿಲ್ಲಾಡಳಿತದ ಅಧಿಕಾರಿಗಳು ಪೂರ್ವ ಸಿದ್ಧತೆಯಲ್ಲಿ ತೊಡಗಿಸಿಕೊಂಡರು.**

ರಾಜಕೀಯದ ಚದುರಂಗದಾಟದಲ್ಲಿ ಏಳು-ಬೀಳುಗಳನ್ನು ಕಂಡು, ದೇಶದ ಅತ್ಯುನ್ನತ ಪ್ರಧಾನಿ ಹುದ್ದೆಯ ವರೆಗೂ ಏರಿದ ಹೆಚ್.ಡಿ.ದೇವೇಗೌಡರ ಬದುಕಿನ ಹಿಂದಿದ್ದ ಶಕ್ತಿ, ಅವರ ಯಶಸ್ಸಿನ ಮೌನ ಸೂತ್ರಧಾರ ಚನ್ನಮ್ಮ ದೇವೇಗೌಡ ಅವರ ಅಗಲಿಕೆಗೆ ಇಡೀ ರಾಜ್ಯ ಕಂಬನಿ ಮಿಡಿದಿದೆ. ಕೇವಲ ಒಬ್ಬ ನಾಯಕನ ಪತ್ನಿಯಾಗಿ ಮಾತ್ರವಲ್ಲದೆ, ಒಂದು ಬೃಹತ್ ರಾಜಕೀಯ ಕುಟುಂಬವನ್ನು ಒಗ್ಗಟ್ಟಿನಿಂದ ಮುನ್ನಡೆಸಿದ ಮಾತೃಶ್ರೀಯ ನಿರ್ಗಮನದ ದುಃಖ ಹೇಳ ತೀರದಾಗಿದೆ.

ಹಿಂದೂ ಸಂಪ್ರದಾಯದ ಧಾರ್ಮಿಕ ಪೂಜಾ ಕಾರ್ಯಗಳಲ್ಲಿ ಅಪಾರ ನಂಬಿಕೆ ಬೆಳೆಸಿಕೊಂಡಿದ್ದ ಚನ್ನಮ್ಮ ಅವರು ದೈವಾರಾಧನೆಯಲ್ಲಿ ದಿನಪೂರ್ಣ ಉಪವಾಸ ವಿದ್ದು, ಶ್ರದ್ಧಾಭಕ್ತಿಯಿಂದ ಕುಟುಂಬ ಸಮೇತರಾಗಿ ಆರಾಧನಾ ಕಾರ್ಯದಲ್ಲಿ ಭಾಗಿಯಾಗುತ್ತಿದ್ದರು. ಆರಾಧ್ಯದೈವ ಬೆಟ್ಟದ ರಂಗನಾಥ ಸ್ವಾಮಿಯ ಭಕ್ತೆಯಾಗಿದ್ದ ಅವರ ಅಂತ್ಯಕ್ರಿಯೆ ಭಗವಂತನ ತಪ್ಪಲಿನಲ್ಲಿ ನೆರವೇರುತ್ತಿರುವುದು ಅವರ ನಿಸ್ವಾರ್ಥ ಭಕ್ತಿಗೆ ಸಾಕ್ಷಿಯಾಗಿದೆ.

ಪೂರ್ವಕ್ಕೆ ಹರದನಹಳ್ಳಿ ಈಶ್ವರನ ಸನ್ನಿಧಾನ, ಪಶ್ಚಿಮಕ್ಕೆ ಲಕ್ಷ್ಮಿ ವೆಂಕಟರಮಣ ಸ್ವಾಮಿಯ ಸುಕ್ಷೇತ್ರ, ಉತ್ತರಕ್ಕೆ ಬೆಟ್ಟದ ಮೇಲೆ ನೆಲೆಸಿರುವ ರಂಗನಾಥ ಸ್ವಾಮಿಯ ಸ್ವಕ್ಷೇತ್ರದ ಪುಣ್ಯ ಸ್ಥಳದಲ್ಲಿ ಸಂಪ್ರದಾಯದಂತೆ ಅಂತ್ಯಕ್ರಿಯೆ ನೆರವೇರಲಿದೆ.

ಅಂತ್ಯಕ್ರಿಯೆ ನಡೆಯುವ ಸ್ಥಳವನ್ನು ಜೆಸಿಬಿ, ಹಿಟ್ಯಾಚಿ, ರೋಲರ್, ಹತ್ತಾರು ಟಿಪ್ಪರ್, ಟ್ರ್ಯಾಕ್ಟರ್‌ಗಳು ನೆಲಸಮತಟ್ಟು ರಸ್ತೆ ನಿರ್ಮಾಣ ಕೆಲಸ ಕಾರ್ಯಗಳಲ್ಲಿ ತೊಡಗಿದ್ದವು. ಮಳೆ ಗಾಳಿಗೆ ರಕ್ಷಣೆಯಾಗಿ ವಾಟರ್ ಪ್ರೂಫ್ ಶಾಮಿಯಾನ, 7 ಆ್ಯಂಬುಲೆನ್ಸ್, ಗಣ್ಯರು, ಅತಿಥಿಗಳು, ಕುಟುಂಬಸ್ಥರು ಹಾಗು ಸಾರ್ವಜನಿಕರು ಕೂರಲು ಸುಮಾರು 3 ಸಾವಿರ ಪ್ರತ್ಯೇಕ ಆಸನ, ವಿದ್ಯುತ್, ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳಲಾಗಿದೆ.

**ಇಡೀ ದಿನ ಕಣ್ಣೀರಲ್ಲೇ ಕಳೆದ ರೇವಣ್ಣ**

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಭಾನುವಾರ ಇಡೀ ದಿನ ಪ್ರೀತಿಯ ಅಮ್ಮನ ಅಗಲಿಕೆಯ ನೋವಿನಿಂದ ಕಣ್ಣೀರಲ್ಲೇ ಕಳೆದರು. ಯಾರೇ ಎದುರಾದರೂ ಅಮ್ಮನನ್ನು ಹೇಗೆ ಮರೆಯಲಿ, ದೇವರು ನನ್ನ ಬಿಟ್ಟು ದೂರ ಹೋಯಿತು. ಅಮ್ಮ ಎಂದು ಇನ್ನು ಮುಂದೆ ಯಾರನ್ನು ಕರೆಯಲಿ. ಶೃಂಗೇರಿ ಶ್ರೀಗಳು ಬನ್ನಿ ಚನ್ನಮ್ಮನವರೇ ಅಂತ ಕರೀತಾ ಇದ್ರು, ಈಗ ಅವರೇ ಇಲ್ವಲ್ಲಾ!. ಎಷ್ಟೋ ಜನರಿಗೆ ಅನ್ನ ಹಾಕಿದ ಕೈ ಅವರದು. ಕೊನೆಯದಾಗಿ ತಿರುಪತಿ ಪ್ರಸಾದ ಕೊಟ್ಟು ಮಾತನಾಡಿಸಿದ್ದೆ. ವೈದ್ಯರು ನಿಮ್ಮ ತಾಯಿ ಗುಣಮುಖ ಆಗುತ್ತಾರೆಂದು ಧೈರ್ಯ ಹೇಳಿದ್ದರು. ಆದರೆ, ಅವರು ಬದುಕಿ ಬರಲಿಲ್ಲವೆಂದು ಬಿಕ್ಕಿ ಬಿಕ್ಕಿ ಅತ್ತರು.

ಅಂತ್ಯಕ್ರಿಯೆ ನಡೆಯುವ ಸ್ಥಳಕ್ಕೆ ಶಾಸಕರಾದ ಎ. ಮಂಜು, ಸಿ.ಎನ್.ಬಾಲಕೃಷ್ಣ, ಹೆಚ್.ಪಿ.ಸ್ವರೂಪ್, ಸಂಸದ ಶ್ರೇಯಸ್ ಪಟೇಲ್, ಮಾಜಿ ಸಂಸದ ಸಿ.ಎಸ್. ಪುಟ್ಟರಾಜು, ಮಾಜಿ ಶಾಸಕ ವೈ.ಎಸ್.ವಿ.ದತ್ತ, ಸೇರಿ ಅನೇಕರು ಭೇಟಿ ನೀಡಿ ಹೆಚ್.ಡಿ.ರೇವಣ್ಣ ಅವರಿಗೆ ಸಾಂತ್ವನ ಹೇಳಿದರು. ಸಂಸದ ಶ್ರೇಯಸ್ ಪಟೇಲ್ ಅವರ ಹೆಗಲ ಮೇಲೆ ಕೈ ಹಾಕಿ ರೇವಣ್ಣ ಅವರು ಗಳಗಳನೆ ಅತ್ತುಬಿಟ್ಟರು.

**1400ಕ್ಕೂ ಹೆಚ್ಚು ಪೊಲೀಸರು**

ಶ್ರೀಮತಿ ಚನ್ನಮ್ಮ ಅವರ ಅಂತ್ಯಕ್ರಿಯೆಗೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ಮೈಸೂರು ವಲಯ ಐಜಿ ಬೋರಲಿಂಗಯ್ಯ ಅವರು ಪಟ್ಟಣದಲ್ಲೇ ಠಿಕಾಣಿ ಹೂಡಿ ಸಕಲ ಸಿದ್ಧತೆಯ ನಿಗಾ ವಹಿಸಿದರು. ಹಾಸನ, ಕೊಡಗು, ಮಂಡ್ಯ, ಚಾಮರಾಜನಗರ ಹಾಗು ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನಿಯೋಜಿಸಲಾಗಿದೆ. ಒಟ್ಟು 1400 ಪೊಲೀಸ್ ಸಿಬ್ಬಂದಿ, 60 ಡಿವೈಎಸ್‌ಪಿ, 260 ಪಿಎಸ್‌ಐ ಹಾಗು 500ಕ್ಕೂ ಅಧಿಕ ಹೋಮ್ ಗಾರ್ಡ್ಸ್‌ಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ.

**ಅಂತ್ಯಕ್ರಿಯೆ ಜಾಗ ಪರಿಶೀಲಿಸಿದ ವಾಸ್ತು ತಜ್ಞರು**

ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಶ್ರೀಮತಿ ಚನ್ನಮ್ಮ ಅವರ ಅಂತ್ಯಕ್ರಿಯೆ ನೆರವೇರಲಿದ್ದು ಬೆಂಗಳೂರಿನ ವಾಸ್ತು ತಜ್ಞರು ಸ್ಥಳ ಪರಿಶೀಲಿಸಿದರು. ಪುರೋಹಿತ ಕಣ್ಣನ್ ಸ್ವಾಮಿ ಮಾರ್ಗದರ್ಶನದಲ್ಲಿ ಕಾರ್ಯಗಳು ನಡೆದಿದ್ದು, ವಾಸ್ತು ಪ್ರಕಾರ ಅಂತಿಮ ವಿಧಿ ವಿಧಾನ ನಡೆಯಲಿದೆ.

ವಾಸ್ತುತಜ್ಞ ಹರಿಪ್ರಸಾದ್ ಅವರು ಪೂರ್ವ, ಉತ್ತರ ದಿಕ್ಕಿನಲ್ಲಿ ಇಳಿಜಾರು ಹಾಗು ದಕ್ಷಿಣ ಮತ್ತು ಪಶ್ಚಿಮ ದಿಕ್ಕಿಗೆ ಎತ್ತರ ಇರುವಂತೆ ಸೂಚಿಸಿದರು. ದಕ್ಷಿಣ-ಪಶ್ಚಿಮ ದಿಕ್ಕಿನಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುವುದು.

## ಐದು ಹೆಲಿಪ್ಯಾಡ್ ನಿರ್ಮಾಣ

ಶ್ರೀಮತಿ ಚನ್ನಮ್ಮ ಅವರ ಅಂತ್ಯಕ್ರಿಯೆಗೆ ಅತಿ ಗಣ್ಯರು ಆಗಮಿಸುವ ಹಿನ್ನಲೆಯಲ್ಲಿ ಹರದನಹಳ್ಳಿಯಲ್ಲಿ 2, ಹೊಳೆನರಸೀಪುರದಲ್ಲಿ 3 ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾಹಿತಿ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಂತ್ಯಕ್ರಿಯೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸೋಮವಾರ ಬೆಳಿಗ್ಗೆವರೆಗೆ ಸಾರ್ವ ಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಅಂತಿಮ ದರ್ಶನಕ್ಕಾಗಿ ಬರುವ ಸಾಧ್ಯತೆ ಹಿನ್ನಲೆಯಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ನಿವಾಸದ ಎದುರು ವ್ಯವಸ್ಥೆ ಮಾಡಲಾಗಿದೆ. ಕಾನೂನು ಸುವ್ಯವಸ್ಥೆ ಹಿತದೃಷ್ಟಿಯಿಂದ ಜು.19 ಹಾಗು 20 ರಂದು ಜಿಲ್ಲಾದ್ಯಂತ ಮದ್ಯ ಮಾರಾಟ ನಿಷೇಧ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

## ಇಂದು ಹೊಳೆನರಸೀಪುರ ತಾಲ್ಲೂಕಿನ ಶಾಲಾ-ಕಾಲೇಜುಗಳಿಗೆ ರಜೆ

ಹಾಸನ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ನಿಧನ ಹಿನ್ನಲೆಯಲ್ಲಿ ಜು.20ರ ಸೋಮವಾರ ಹೊಳೆನರಸೀಪುರ ತಾಲ್ಲೂಕಿನ ಎಲ್ಲಾ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಆದೇಶಿಸಿದ್ದಾರೆ.

ಶ್ರೀಮತಿ ಚನ್ನಮ್ಮ ಅವರ ಅಂತ್ಯಕ್ರಿಯೆ ಹಿನ್ನಲೆಯಲ್ಲಿ ದೇಶ ಹಾಗು ರಾಜ್ಯದ ನಾನಾ ಭಾಗಗಳಿಂದ ಗಣ್ಯರು, ಸಾರ್ವಜನಿಕರು ಭಾಗವಹಿಸು ತ್ತಾರೆ. ಪಟ್ಟಣದಲ್ಲಿ ಜನಸಂದಣಿ, ಸಂಚಾರ ದಟ್ಟಣೆ ಹೆಚ್ಚಾಗುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ರಜೆ ನೀಡಲಾಗಿದೆ. ತಾಲ್ಲೂಕಿನ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ, ಅಂಗನವಾಡಿ, ಶಾಲಾ ಹಾಗು ಕಾಲೇಜಿಗೆ ರಜೆ ಇರಲಿದೆ. ಈ ರಜೆ ಅವಧಿಯನ್ನು ಪ್ರಸಕ್ತ ಶೈಕ್ಷಣಿಕ ಅವಧಿಯ ರಜಾ ದಿನಗಳಲ್ಲಿ (ಶನಿವಾರ, ಭಾನುವಾರ) ಸರಿದೂಗಿಸಲು ಜಿಲ್ಲಾಧಿಕಾರಿ ನಿರ್ದೇಶನ ನೀಡಿದ್ದಾರೆ.

**ಶ್ರೀಮತಿ ಚನ್ನಮ್ಮ ಅವರ ಅಂತ್ಯಕ್ರಿಯೆ ಹಿನ್ನಲೆಯಲ್ಲಿ ಸೋಮವಾರ ಹೊಳೆನರಸೀಪುರ ತಾಲ್ಲೂಕಿನಾದ್ಯಂತ ಬೆಳಿಗ್ಗೆಯಿಂದ ಅಂಗಡಿ-ಮುಂಗಟ್ಟುಗಳುಗಳನ್ನು ಬಂದ್ ಮಾಡಲಾಗುವುದು.**

## ನಮ್ಮ ಅಜ್ಜಿ ಜೊತೆ ಅನ್ಯೋನ್ಯ ಸಂಬಂಧ

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ನಮ್ಮ ಅಜ್ಜಿ ಹಾಗು ಚನ್ನಮ್ಮ ಅಜ್ಜಿ ತುಂಬಾ ಅನ್ಯೋನ್ಯವಾಗಿದ್ದರು. ರಾಜಕಾರಣ ಬೇರೆ ಈ ಸಂದರ್ಭ ಬೇರೆ. ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಗುವುದು. ಜಿಲ್ಲೆಯ ಸಾರ್ವಜನಿಕರು ಶಾಂತ ರೀತಿಯಿಂದ ಪಾಲ್ಗೊಳ್ಳಬೇಕೆಂದು ಕೋರಿದರು. ಸೋಮವಾರ ಮಧ್ಯಾಹ್ನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ವಿ. ಸೋಮಣ್ಣ, ನಗರಾಭಿವೃದ್ಧಿ ಖಾತೆ ಸಚಿವ ಮನೋಹರ್ ಲಾಲ್ ಕಟ್ಟರ್, ಶಿವರಾಜ್ ಸಿಂಗ್ ಚೌಹಾಣ್, ಮಾಜಿ ಸಚಿವ ಕೆ.ಎನ್.ರಾಜಣ್ಣ ಸೇರಿ ಹಲವರು ಆಗಮಿಸಲಿದ್ದಾರೆ. ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ನಾನು ಇಲ್ಲೇ ಇದ್ದು ಕುಟುಂಬದ ಸದಸ್ಯನಾಗಿ ಜವಾಬ್ದಾರಿ ನಿಬಾಯಿಸುತ್ತೇನೆಂದರು.

## ನಮ್ಮಿಬ್ಬರದ್ದು ತಾಯಿ-ಮಗಳ ಸಂಬಂಧ

• ಪ್ರಜೋದಯ ವರದಿ



**ಹಾಸನ :** ಶ್ರೀಮತಿ ಚನ್ನಮ್ಮ ಅವರು ಹೆತ್ತ ತಾಯಿಗಿಂತಲೂ ಹೆಚ್ಚಾಗಿ ನನ್ನನ್ನು ಪ್ರೀತಿಸುತ್ತಿದ್ದರು. ನಮ್ಮಿಬ್ಬರದ್ದು ತಾಯಿ-ಮಗಳ ಸಂಬಂಧ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಧರ್ಮಪತ್ನಿ ಭವಾನಿ ರೇವಣ್ಣ ಅವರು ಭಾವುಕರಾದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನೆಗೆ ಯಾರೇ ಬಂದರೂ ಊಟ-ಉಪಾಹಾರ ಕೊಟ್ಟೇ ಕಳುಹಿಸುತ್ತಿದ್ದರು. ಹೊಳೆನರಸೀಪುರದಲ್ಲೇ ಹೆಚ್ಚು ಸಮಯ ಇರುತ್ತಿದ್ದರು. ಪೂಜೆ ಪುನಸ್ಕಾರ, ಮದುವೆ ಸಮಾರಂಭ ಏನೇ ಇದ್ದರೂ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಚನ್ನಮ್ಮ ಅವರ ಪುತ್ರಿಯರಾದ ಅನುಸೂಯ ಹಾಗು ಶೈಲಜಾ ಅವರನ್ನು ತುಂಬಾ ಚೆನ್ನಾಗಿ ನೋಡಿಕೊಂಡಿದ್ದರೆಂದರು.

2001ರಲ್ಲಿ ನಡೆದ ಆ್ಯಸಿಡ್ ದಾಳಿಯಿಂದ ಭಾರೀ ಕುಗ್ಗಿದ್ದರು. ಆ ಭೀಕರ ಘಟನೆಯನ್ನು ಮರೆತು ಮೊದಲಿನಂತೆ ಬದುಕು ಕಟ್ಟಿಕೊಂಡರು. ಚನ್ನಮ್ಮ ಅವರು ಗಟ್ಟಿಗಿತ್ತಿ ಎಂಬುದಕ್ಕೆ ಈ ಪ್ರಸಂಗ ಸಾಕ್ಷಿ ಎಂದರು.

**ಪಟ್ಟಣದ ಮನೆ ಇಷ್ಟವಾಗಿತ್ತು**

ಹೊಳೆನರಸೀಪುರ ಪಟ್ಟಣದ ಮನೆ ಅವರಿಗೆ ತುಂಬಾ ಇಷ್ಟವಾಗಿತ್ತು. ಯಾವಾಗಲಾದರೂ ಬಂದಾಗ ಲವಲವಿಕೆಯಿಂದ ಇರುತ್ತಿದ್ದರು. ಅವರ ಅಗಲಿಕೆ ಭಾರೀ ನೋವು ತರಿಸಿದೆ. ತಮ್ಮ ಸರಳತೆ, ಹೃದಯ ವೈಶಾಲ್ಯತೆ ಹಾಗು ಸಹಾಯ ಮನೋಭಾವದಿಂದ ಎಲ್ಲರ ಮನಸ್ಸಿನಲ್ಲೂ ಅಚ್ಚಳಿಯ ಛಾಪು ಮೂಡಿಸಿದ್ದಾರೆ. ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಂಪ್ರದಾಯದಂತೆ ಅಂತಿಮ ವಿಧಿ ವಿಧಾನ ನೆರವೇರಲಿದೆ. ಸಂಜೆ 4 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದರು.

## ಅಂತಿಮ ದರ್ಶನಕ್ಕೆ ಕಾದು ನಿಂತ ಅಭಿಮಾನಿಗಳು

• ಪ್ರಜೋದಯ ವರದಿ

**ಹಾಸನ:** ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ದೇವೇಗೌಡ ಅವರ ಅಗಲಿಕೆಯ ನೋವು ಇಡೀ ರಾಜ್ಯವನ್ನೇ ಮೌನದಲ್ಲಿ ಮುಳುಗಿಸಿದೆ.

ಭಾನುವಾರ ರಾತ್ರಿ ಜಿಲ್ಲೆಯಲ್ಲಿ ಜನರು ಕಂಬನಿ ಮಿಡಿದು ಅವರಿಗೆ ಅಂತಿಮ ನಮನ ಸಲ್ಲಿಸಿದರು. ಬೆಂಗಳೂರಿನ ಪದ್ಮನಾಭನಗರದ ನಿವಾಸದಿಂದ ತೆರೆದ ವಾಹನದಲ್ಲಿ ಪಾರ್ಥಿವ ಶರೀರವನ್ನು ಹಾಸನದತ್ತ ತರಲಾಯಿತು. ದಾರಿಯುದ್ದಕ್ಕೂ ತಾಲ್ಲೂಕು, ಹೋಬಳಿ ಕೇಂದ್ರಗಳಲ್ಲಿ ಸಾವಿರಾರು ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ಹಾಗು ಸಾರ್ವಜನಿಕರು ಕಣ್ಣೀರಿನ ವಿದಾಯ ಹೇಳಿದರು. ಹೂಮಾಲೆ ಅರ್ಪಿಸಿ, ಮೌನವಾಗಿ ತಲೆಬಾಗಿ ತಮ್ಮ ಪ್ರೀತಿಯ ನಾಯಕನ ಕುಟುಂಬದ ಹಿರಿಯರನ್ನು ಕೊನೆಯ ಬಾರಿ ಕಣ್ತುಂಬಿಕೊಂಡರು.

ಅಮ್ಮ ಎಂದು ಗೌರವದಿಂದ ಕರೆಯುತ್ತಿದ್ದ ಅನೇಕರು ಕಂಬನಿ ಮಿಡಿಯುತ್ತಾ ಅಂತಿಮ ದರ್ಶನ ಪಡೆದ ದೃಶ್ಯಗಳು ಮನಕಲಕುವಂತಿದ್ದವು. ಅವರ ಸರಳತೆ, ಮಮತೆ ಮತ್ತು ಸೇವಾ ಮನೋಭಾವವನ್ನು ನೆನೆದು ಹಲವರು ಭಾವುಕರಾದರು. ಶೋಕದ ಛಾಯೆಯಲ್ಲಿ ಮುಳುಗಿದ್ದ ಹಾಸನ, ತನ್ನ ಮಣ್ಣಿನ ಮಗಳೊಬ್ಬರಿಗೆ ಅತ್ಯಂತ ಗೌರವಯುತ ಹಾಗು ಹೃದಯಸ್ಪರ್ಶಿ ವಿದಾಯ ಹೇಳಿತು. ಹಾಸನ ಗಡಿಯ ಹಿರೀಸಾವೆ, ಚನ್ನರಾಯಪಟ್ಟಣ, ಉದಯಪುರ, ಶಾಂತಿಗ್ರಾಮ, ಬೂವನಹಳ್ಳಿ, ಡೇರಿ ವೃತ್ತ, ಎನ್.ಆರ್.ವೃತ್ತ ಹಾಗು ಮೊಸಳೆಹೊಸಹಳ್ಳಿಯಲ್ಲಿ ಸಾರ್ವಜನಿಕರು ಕಾದು ನಿಂತಿದ್ದರು.

ಸಂಜೆ 6 ಗಂಟೆಯಿಂದಲೇ ಶಾಸಕ ಹೆಚ್.ಪಿ.ಸ್ವರೂಪ್ ಅವರು ಬೂವನಹಳ್ಳಿ ವೃತ್ತದಲ್ಲಿ ಅಪಾರ ಕಾರ್ಯಕರ್ತರೊಂದಿಗೆ ಕಾಯುತ್ತಾ ನಿಂತರು. ಭಾನುವಾರ ತಡರಾತ್ರಿ ವಾಹನ ನಗರ ಪ್ರವೇಶಿಸಿತು. ಮಹಿಳೆಯರು, ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.



ಶ್ರೀಮತಿ ಚನ್ನಮ್ಮ ಅವರ ನಿಧನದ ಹಿನ್ನಲೆಯಲ್ಲಿ ಸೋಮವಾರ ಹೊಳೆನರಸೀಪುರದಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಮನೆ ಬಳಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.



## ಗೌಡರ ಕುಟುಂಬಕ್ಕೆ ಆಧಾರ ಸ್ತಂಭವಾಗಿದ್ದ ಚನ್ನಮ್ಮ: ಶ್ರೇಯಸ್



ಹಾಸನ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ನಿಧನ ಸುದ್ದಿ ತೀವ್ರ ಆಘಾತ ತರಿಸಿದೆ. ಎಲ್ಲರ ಕುಟುಂಬಕ್ಕೂ ತಾಯಿಯೇ ಆಧಾರ ಸ್ತಂಭ ಆಗಿರುತ್ತಾರೆ. ದೇವೇಗೌಡರು ಹಾಗು ಅವರ ಕುಟುಂಬಸ್ಥರಿಗೆ ಅಜ್ಜಿಯ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಸಂತಾಪ ಸೂಚಿಸಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ದೇಶದ ಪ್ರಧಾನಿಯಾಗಿ ಜಿಲ್ಲೆಯ ಕೀರ್ತಿಯನ್ನು ಜಾಗತಿಕ ಮಟ್ಟಕ್ಕೆ ಪಸರಿಸಿದ ಕೀರ್ತಿ ದೇವೇಗೌಡರಿಗೆ ಸಲ್ಲುತ್ತದೆ. ದೇವೇಗೌಡರ ಜೀವನದ ಪ್ರತಿ ಹೆಜ್ಜೆಯಲ್ಲೂ ಚನ್ನಮ್ಮ ಅವರ ಕೊಡುಗೆ ಇದೆ. ಸರಳತೆ, ಸೌಮ್ಯ ಸ್ವಭಾವ ಹಾಗು ಕಾಳಜಿ ಗುಣಗಳಿಂದ ಅವರು ಮನ್ನಣೆ ಗಳಿಸಿದ್ದರೆಂದರು.

ಶ್ರೀಮತಿ ಚನ್ನಮ್ಮ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಸುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆದೇಶಿಸಿದ್ದಾರೆ. ಅಂತ್ಯಕ್ರಿಯೆಯಲ್ಲಿ ಮುಖ್ಯಮಂತ್ರಿ ಸೇರಿ ಇತರ ಗಣ್ಯರು ಪಾಲ್ಗೊಳ್ಳಲಿದ್ದು, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ಸೂಚನೆ ನೀಡಲಾಗಿದೆ. ಭದ್ರತೆ ಹಾಗು ಸಾರ್ವಜನಿಕ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಒಟ್ಟು 1,400 ಪೊಲೀಸ್ ಸಿಬ್ಬಂದಿ, 5 ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, 250 ಪಿಎಸ್‌ಐ ಹಾಗು 60 ಡಿವೈಎಸ್‌ಪಿಗಳ ನೇಮಿಸಲಾಗಿದೆ ಎಂದರು.

ಸೋಮವಾರ ಹೊಳೆನರಸೀಪುರದ ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ. ಅಂತಿಮ ದರ್ಶನಕ್ಕಾಗಿ ಸಾರ್ವಜನಿಕರಿಗೆ ಅಗತ್ಯ ವ್ಯವಸ್ಥೆ ಮಾಡಲಾಗಿದೆ. ಅಗಲಿದ ಹಿರಿಯ ಚೇತನಕ್ಕೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಜವಾಬ್ದಾರಿ. ಶಾಂತಿಯುತವಾಗಿ ಎಲ್ಲರೂ ಚೆನ್ನಮ್ಮ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದರು.

## ಅಂತಿಮ ದರ್ಶನ ಮಾಡದಿದ್ದರೆ ದ್ರೋಹ ಮಾಡಿದಂತಾಗುತ್ತೆ

• ಪ್ರಜೋದಯ ವರದಿ

**ಹಾಸನ:** ಶ್ರೀಮತಿ ಚನ್ನಮ್ಮ ಅವರನ್ನು 30-40 ವರ್ಷಗಳಿಂದ ನೋಡಿಕೊಂಡು ಬಂದಿದ್ದೇನೆ, ಅವರು ದೈವಾಧೀನರಾದಾಗ ಅಂತಿಮ ದರ್ಶನ ಪಡೆಯದಿದ್ದರೆ ಗಂಭೀರ ದ್ರೋಹವಾಗುತ್ತದೆಂದು ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ಚನ್ನರಾಯಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಏಳಿಗೆ ಬಯಸಿ ಹರಸಿದವರನ್ನು ಸ್ಮರಿಸುವುದು ಮಾನವೀಯ ಧರ್ಮ, ಮನುಷ್ಯತ್ವ . ಶ್ರೀಮತಿ ಚನ್ನಮ್ಮ ಅವರು ಯಾವಾಗ ಮನೆಗೆ ಹೋದರೂ ಉಪಾಹಾರ ಕೊಡುತ್ತಿದ್ದರು. ಸಾವಧಾನದಿಂದ ಯೋಗ ಕ್ಷೇಮ ವಿಚಾರಿಸುತ್ತಿದ್ದರು. ನಾವು ಹೆಚ್.ಡಿ.ದೇವೇಗೌಡ ಅವರೊಂದಿಗೆ ಮಾತನಾಡುತ್ತಾ ಕೆಳಗೆ ಕುಳಿತ್ತಿದ್ದರೆ ಧ್ವನಿ ಕೇಳಿ ಅವರೇ ಕೆಳಗಿಳಿದು ಬರುತ್ತಿದ್ದರು. ಅವರ ಅಗಲಿಕೆ ತುಂಬಲಾರದ ನಷ್ಟವುಂಟು ಮಾಡಿದೆ ಎಂದರು.

ನಾನು ರಾಜಕೀಯಕ್ಕೆ ಬಂದಾ ಗಿನಿಂದಲೂ ಚನ್ನಮ್ಮ ಅವರೊಂ ದಿಗೆ ಬಾಂಧವ್ಯ ಬೆಳೆದಿತ್ತು. ಅರಸೀಕೆರೆಯ ಉಳ್ಳಿಕೊಪ್ಪಲು ಪುಟ್ಟಸ್ವಾಮಿ ಅವರ ಮನೆಗೆ ಯಾವಾಗಲೂ ಬರುತ್ತಿದ್ದರು. ಒಳ್ಳೆಯ ವ್ಯಕ್ತಿತ್ವದ ತಾಯಿ ಅವರಾ ಗಿದ್ದರು. ಸತಿಗೆ ತಕ್ಕ ಪತ್ನಿಯಾಗಿ ದ್ದರು. ಶ್ರೀಮತಿ ಚನ್ನಮ್ಮ ಅವ ರನ್ನು ಸ್ಮರಿಸಲು ನನ್ನ ಬಳಿ ಸಾಕಷ್ಟು ನೆನಪು ಗಳಿವೆ. ಕೇವಲ 14 ಓಟುಗಳಿಂದ ನಾನು ಚುನಾವಣೆ ಸೋತಾಗ ವ್ಯಥೆ ಪಟ್ಟು ಸಾಂತ್ವನ ಹೇಳಿದ್ದರೆಂದರು.

ನಾನು ಹಾಗು ಇನ್ನು ನಾಲ್ಕೈದು ಜನರು ಜೆ.ಪಿ.ಜಯಣ್ಣ ಅವರ ಮನೆಯಲ್ಲಿ ಕುಳಿತಾಗ ಕೋಡಿ ಮಠದಿಂದ ಹೊತ್ತಿಗೆ ತರಿಸಿ ಓದಲಾಗಿತ್ತು. ಹಳಗನ್ನಡದ ಆ ಹೊತ್ತಿಗೆಯಲ್ಲಿ ಕೈಲಾಸನಾಥನ ಸಾನ್ನಿಧ್ಯದಲ್ಲಿ ಮನೆಯ ಗುಟ್ಟು ರಟ್ಟಾದೀತು ಎಂದು ಬರೆದಿರು ವುದನ್ನು ಓದಲಾಯಿತು. ಆಗ ಯಾರಿಗೂ ಏನೂ ಅರ್ಥವಾಗಲಿಲ್ಲ. ಆದರೆ ಮುಂದಿನ 15 ದಿನಗಳಲ್ಲಿ ಹರದನಹಳ್ಳಿ ದೇವೇಶ್ವರ ದೇಗುಲದ ಛಾವಣಿ ಕುಸಿತು ಬಿತ್ತು. ಆಗ ಕೋಡಿಮಠದ ಭವಿಷ್ಯ ನಿಜವಾಯಿತು ಎಂದು ಸ್ಮರಿಸಿದ್ದರು ಎಂದರು.

ಬೆಂಗಳೂರಿನಿಂದ ಹೊಳೆನರಸೀಪುರಕ್ಕೆ ಆಗಮಿಸಿದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರನ್ನು ಮಾರ್ಗಮಧ್ಯೆ ಭೇಟಿಯಾದ ಶಿವಲಿಂಗೇಗೌಡರು ಸಾಂತ್ವನ ಹೇಳಿದರು. ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಕಾಂಗ್ರೆಸ್ ಜಿಲ್ಲಾ ಕಾರ್ಯಧ್ಯಕ್ಷ ಶಶಿಧರ್ ಮತ್ತಿತರರಿದ್ದರು.



## ಹುಟ್ಟೂರಲ್ಲಿ ದೇಗುಲ ನಿರ್ಮಿಸಿದ್ದ ಚನ್ನಮ್ಮ ದೇವೇಗೌಡ



• ಪ್ರಜೋದಯ ವರದಿ

**ಹಾಸನ:** ಪರಮ ದೈವಭಕ್ತೆಯಾಗಿದ್ದ ಶ್ರೀಮತಿ ಚನ್ನಮ್ಮ ಅವರು ಹುಟ್ಟೂರಾದ ಮುತ್ತಿಗೆ ಹಿರೇಹಳ್ಳಿಯಲ್ಲಿ ಶ್ರೀ ಚಂಡಿಕಾಂಬ ದೇವಾಲಯ ನಿರ್ಮಿಸಿದ್ದರು.

ಕುಟುಂಬದಲ್ಲಿ ಮೊದಲು ಹೆಣ್ಣು ಮಗು ಜನಿಸಿದರೆ ಚೆನ್ನಮ್ಮ ಎಂದು ಹೆಸರಿಡುವುದು ವಾಡಿಕೆ. ಅದೇ ಹಿನ್ನಲೆಯಲ್ಲಿ ಚೆನ್ನಮ್ಮ ಅವರಿಗೂ ಹೆಸರು ಬಂತು. ದೇವೇಗೌಡರನ್ನು ವಿವಾಹವಾದ ಬಳಿಕ ಪ್ರತಿವರ್ಷ ಜಾತ್ರೆ ವೇಳೆ ದಂಪತಿ ಸಮೇತ ಪೂಜೆ ಸಲ್ಲಿಸುತ್ತಿದ್ದರು. ಶಿಥಿಲಾವಸ್ಥೆ ತಲುಪಿದ್ದ ದೇಗುಲಕ್ಕೆ ಕಾಯಕಲ್ಪ ಕಲ್ಪಿಸಿದ್ದೇ ಶ್ರೀಮತಿ ಚನ್ನಮ್ಮ ಎಂದು ಗ್ರಾಮಸ್ಥರು ಹೇಳಿದರು.

ವರ್ಷಕ್ಕೊಮ್ಮೆ ದೇವಸ್ಥಾನದ ಬಾಗಿಲು ತೆರೆಯುತ್ತದೆ. ಆ ದಿನ ಬರುತ್ತಿದ್ದ ಚನ್ನಮ್ಮ ಅವರು ಬೆಳಿಗ್ಗೆಯಿಂದ ಸಂಜೆವರೆಗೂ ಪೂಜೆಯಲ್ಲಿ ಭಾಗವಹಿಸುತ್ತಿದ್ದರು. ಮೊದಲ ಪೂಜೆಯನ್ನು ಅವರೇ ಮಾಡಿಸುತ್ತಿದ್ದರು. ಹುಟ್ಟೂರು ಅಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಸುತ್ತಮುತ್ತಲಿನ ಅನೇಕ ಗ್ರಾಮಗಳಲ್ಲಿ ದೇವಸ್ಥಾನ ಕಟ್ಟಿಸಿಕೊಟ್ಟಿದ್ದಾರೆ. ಗ್ರಾಮದ ಯಾರೇ ಹೋದರೂ ಪ್ರೀತಿಯಿಂದ ಕಾಣುತ್ತಿದ್ದರು. ಅವರನ್ನು ಕಳೆದುಕೊಂಡು ನಾವು ಬಡವಾಗಿದ್ದೇವೆಂದು ಭಾವುಕರಾದರು.

**ರಂಗನಾಥ ಸ್ವಾಮಿಗೆ ಮೊದಲ ಪೂಜೆ**

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಕುಟುಂಬಸ್ಥರು ದೈವ ಭಕ್ತರಾಗಿದ್ದರು. ದೇವಸ್ಥಾನಗಳಲ್ಲಿ ಪೂಜೆ ಎಂದರೆ ಮೊದಲು ಶ್ರೀ ರಂಗನಾಥ ಸ್ವಾಮಿ ಸನ್ನಿಧಿಯಲ್ಲಿ ನೆರವೇರುತ್ತಿತ್ತು. ಪುರೋಹಿತರನ್ನು ಪ್ರೀತಿಯಿಂದ ಕಾಣುತ್ತಿದ್ದರೆಂದು ಪ್ರಧಾನ ಅರ್ಚಕ ಸಂಪತ್ ರಾಜ್ ಅವರು ಭಾವುಕರಾದರು.



**"ಮೇಡ್ ಫಾರ್ ಈಚ್ ಅದರ್ ಎಂದರೆ ಅದು ದೇವೇಗೌಡರು ಮತ್ತು ಚನ್ನಮ್ಮ. ಈ ಪದಗಳು ಅವರಿಗಷ್ಟೇ ಸೂಕ್ತ. ರಾಜ್ಯದ ರಾಜಕೀಯ ತರಬೇತಿ ಕೇಂದ್ರವೆಂದರೆ ಅದು ದೇವೇಗೌಡರ ಕುಟುಂಬ. ಮೊದಲ ಬಾರಿ ನಾನು ದೇವೇಗೌಡರ ಮನೆಗೆ ಮಗನ ಮದುವೆ ಆಹ್ವಾನ ಪತ್ರಿಕೆ ಕೊಡಲು ಹೋಗಿದ್ದೆ. ಊಟ ಮಾಡುವ ತನಕ ಬಿಡಲೇ ಇಲ್ಲ. ಯಾರನ್ನೇ ಕಂಡರೂ ಅಷ್ಟೇ ಪ್ರೀತಿ ತೋರುತ್ತಿದ್ದರು. ಅವರ ಅಗಲಿಕೆ ತುಂಬಾ ದುಃಖ ತರಿಸಿದೆ.**

**-ಎ.ಮಂಜು, ಶಾಸಕ**



ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿ ಸೋಮವಾರ ನಡೆಯಲಿರುವ ಶ್ರೀಮತಿ ಚನ್ನಮ್ಮ ದೇವೇಗೌಡ ಅವರ ಅಂತ್ಯಕ್ರಿಯೆ ಪೂರ್ವ ಸಿದ್ಧತೆ ಕುರಿತು ಪೊಲೀಸ್ ಅಧಿಕಾರಿಗಳೊಂದಿಗೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಚರ್ಚಿಸಿದರು.



ಹಿರೀಸಾವೆ ವೃತ್ತದಲ್ಲಿ ಜೆಡಿಎಸ್ ವರಿಷ್ಟ ಹೆಚ್.ಡಿ.ದೇವೇಗೌಡ ಅವರನ್ನು ಸಂಸದ ಶ್ರೇಯಸ್ ಪಟೇಲ್, ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಅವರು ಭೇಟಿ ಮಾಡಿದ ಕ್ಷಣ...

## ಜಿಲ್ಲೆಯ ಗಡಿಯಲ್ಲಿ ಚನ್ನಮ್ಮಗೆ ಅಂತಿಮ ನಮನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಜಿಲ್ಲೆಯ ಹೆಬ್ಬಾಗಿಲು, ತಾಲ್ಲೂಕಿನ ಗಡಿಗೆ ರಾತ್ರಿ 8 ಗಂಟೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಚನ್ನಮ್ಮನವರ ಪಾರ್ಥಿವ ಶರೀರ ಶ್ರದ್ಧಾಂಜಲಿ ವಾಹನವು ಆಗಮಿಸಿತು.

ಚನ್ನರಾಯಪಟ್ಟಣ, ನಾಗಮಂಗಲ ಹಾಗು ತುರುವೇಕೆರೆ ವ್ಯಾಪ್ತಿಯ ಸಾವಿರಾರು ಜನರು ಗಡಿಭಾಗದಲ್ಲಿ ಮಧ್ಯಾಹ್ನದಿಂದಲೇ ಕಾದು ಚನ್ನಮ್ಮ ಅವರ ಅಂತಿಮ ದರ್ಶನ ಪಡೆದು ಪುಷ್ಪನಮನ ಮಾಡಿ ನಮಿಸಿದರು.

ರಾಷ್ಟ್ರೀಯ ಹೆದ್ದಾರಿ ಉದ್ದಕ್ಕೂ ಹಳ್ಳಿ ಹಳ್ಳಿಗಳಲ್ಲಿಯೂ ಚನ್ನಮ್ಮ ಅವರ ಶ್ರದ್ಧಾಂಜಲಿ ಭಾವಚಿತ್ರ ಇರಿಸಿದ್ದು ಸಾರ್ವಜನಿಕರು ಅಂತಿಮ ದರ್ಶನ ಪಡೆಯಲು ಗುಂಪು ಗುಂಪಾಗಿ ನಿಂತಿದ್ದರು. ವಾಹನದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಅನುಸೂಯ, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಸೇರಿದಂತೆ ಕುಟುಂಬದವರು ಇದ್ದರು.

ಸಂಸದ ಶ್ರೇಯಸ್ ಪಟೇಲ್, ಶಾಸಕರಾದ ಕೆ.ಎಂ.ಶಿವಲಿಂಗೇಗೌಡ, ಸಿ.ಎನ್.ಬಾಲಕೃಷ್ಣ, ಮಾಜಿ ಶಾಸಕರಾದ ಸಿ.ಎಸ್.ಪುಟ್ಟೇಗೌಡ, ಎಂ.ಎ.ಗೋಪಾಲಸ್ವಾಮಿ, ರಾಜ್ಯ ಮಾರಾಟ ಮಹಾಮಂಡಳದ ಮಾಜಿ ಅಧ್ಯಕ್ಷ ಸಿ.ಎನ್.ಪುಟ್ಟಸ್ವಾಮಿಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಹೆಚ್.ಜಿ.ರಾಮಕೃಷ್ಣ ಹಾಗು ಸಾರ್ವಜನಿಕರು ಅಂತಿಮ ದರ್ಶನ ಪಡೆದರು.

## ಬರ ನಿರ್ವಹಣೆಯಲ್ಲಿ ಕಾಂಗ್ರೆಸ್ ಸರ್ಕಾರ ವೈಫಲ್ಯ: ಯಡಿಯೂರಪ್ಪ ಟೀಕೆ



• ಪ್ರಜೋದಯ ವರದಿ

**ಕೋಲಾರ:** ಬರಗಾಲದಿಂದ ರಾಜ್ಯ ತತ್ತರಿಸಿದ್ದು, ನಿರ್ವಹಣೆಯಲ್ಲಿ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆ. ರೈತರ ಕಣ್ಣೀರೊರೆಸುವ ಕೆಲಸ ನಡೆದಿಲ್ಲ. ಈ ಸರ್ಕಾರದ ಜನ ವಿರೋಧಿ ನೀತಿಗಳ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯದಾದ್ಯಂತ ಪ್ರವಾಸ ಮಾಡಲಾಗುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.

ತಾಲ್ಲೂಕಿನ ಕುರುಡುಮಲೆಯ ವಿನಾಯಕ ದೇವಾಲಯದಲ್ಲಿ ಭಾನುವಾರ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದೆಂದೂ ಕಾಣದಂತಹ ಭೀಕರ ಬರಗಾಲ, ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಮಳೆ ಇಲ್ಲದೆ ಕೆರೆ, ಕಟ್ಟೆ, ಜಲಾಶಯಗಳಲ್ಲಿ ನೀರಿಲ್ಲ. ಯಾವುದಕ್ಕೂ ರಾಜ್ಯ ಸರ್ಕಾರ ಸ್ಪಂದಿಸುತ್ತಿಲ್ಲ. ರಾಜ್ಯದ ಎಲ್ಲಾ ಕಡೆಗಳಲ್ಲಿ ಸಂಚರಿಸಿ ಜನರ ಕಷ್ಟ ಅರಿಯಲಾಗುವುದೆಂದರು.

ರಾಜ್ಯ ಸರ್ಕಾರದ ಆಡಳಿತ ವೈಖರಿಗೆ ಜನ ಬೇಸತ್ತಿದ್ದು, ಬದಲಾವಣೆಗೆ ಹಾತೊರೆಯುತ್ತಿದ್ದಾರೆ. ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕೂಡ ಹಗಲು ರಾತ್ರಿ ರಾಜ್ಯದುದ್ದಗಲಕ್ಕೂ ಪ್ರವಾಸ ಮಾಡಿ ಪಕ್ಷ ಸಂಘಟಿಸಿ ಅಧಿಕಾರಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ. ಬಿಡದಿ ಟೌನ್‌ಶಿಪ್ ವಿಚಾರವಾಗಿಯೂ ಪಾದಯಾತ್ರೆ ನಡೆಸಲು ಅವರು ತೀರ್ಮಾನ ಕೈಗೊಂಡಿದ್ದಾರೆಂದು ಹೇಳಿದರು.

# ನೋವು-ನಲಿವಿಗೆ ಧ್ವನಿಯಾದ ಕೆ.ಟಿ.ಶಿವಪ್ರಸಾದ್

• ಪ್ರಜೋದಯ ವರದಿ




**ಹಾಸನ:** ಅಂತರಾಷ್ಟ್ರೀಯ ಚಿತ್ರಕಲಾವಿದ ಕೆ.ಟಿ.ಶಿವಪ್ರಸಾದ್ ಅವರು ಕಲಾವಿದ ಮಾತ್ರವಲ್ಲದೆ ಸಮಾಜ ನೋವು-ನಲಿವನ್ನು ಕಲೆಯ ಮೂಲಕ ಸಮಾಜದ ಎದುರು ತೆರೆದಿಟ್ಟ ಮೇರು ವ್ಯಕ್ತಿ ಎಂದು ಕೇಂದ್ರ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಚಿ.ಸು.ಕೃಷ್ಣಶೆಟ್ಟಿ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಕೆ.ಟಿ.ಶಿವಪ್ರಸಾದ್ ಅಭಿಮಾನಿಗಳ ಬಳಗದಿಂದ ಭಾನುವಾರ ನಡೆದ ಕೆ.ಟಿ.ಶಿವಪ್ರಸಾದ್ ಅವರಿಗೆ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1984ರ ಕಲಾಯಾತ್ರೆಯಲ್ಲಿ ತಮ್ಮದೇ ನಗ್ನ ಚಿತ್ರದ ಮೂಲಕ ಸಮಾಜದ ಗಮನ ಸೆಳೆದಿದ್ದಾರೆ. ಅವರ ಕಲಾತ್ಮಕ ಧೈರ್ಯಕ್ಕೆ ಇದು ಸಾಕ್ಷಿಯಾಗಿದೆ. ಜೆ.ಜೆ.ಕಲಾಶಾಲೆಯ ಶೈಲಿಯ ಪ್ರಭಾವ ಇದ್ದರೂ ಅದನ್ನು ಮೀರಿ ಹೊಸ ಕಲಾಭಾಷೆಯನ್ನು ರೂಪಿಸಿಕೊಂಡಿದ್ದ ಅವರು, ಗುಣಮಟ್ಟದ ಮತ್ತು ಬೃಹತ್ ಗಾತ್ರದ ಕಲಾಕೃತಿ ರಚಿಸಿದ್ದರು. ಉತ್ತಮ ಓದುಗರಾಗಿದ್ದ ಶಿವಪ್ರಸಾದ್ ಸಾರ್ವಜನಿಕ ವೇದಿಕೆಗಳಲ್ಲಿ ಕಡಿಮೆ ಮಾತನಾಡಿದರೂ ಕಲೆಯೇ ಅವರ ಧ್ವನಿಯಾಗಿತ್ತು ಎಂದು ಹೇಳಿದರು.

ದಲಿತ ಚಳವಳಿಯ ರಾಜ್ಯ ನಾಯಕ ಮಾವಳ್ಳಿ ಶಂಕರ್ ಅವರು ಮಾತನಾಡಿ, ಕೆ.ಟಿ.ಶಿವಪ್ರಸಾದ್ ದಲಿತ ಚಳವಳಿಗೆ ಹೊಸ ಚೈತನ್ಯ ತುಂಬಿದರು. ಅನೇಕ ಯುವ ಹೋರಾಟಗಾರರಿಗೆ ಅವರು ಪ್ರೇರಣೆಯಾಗಿದ್ದರು. ಅವರ ಹೆಸರಿನಲ್ಲಿ ಕಲಾ ಗ್ಯಾಲರಿ ನಿರ್ಮಿಸುವುದು ನಿಜವಾದ ಗೌರವವಾಗಲಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಅವರೊಂದಿಗೆ ನಡೆಯಲಿರುವ ಸಭೆಯಲ್ಲಿ ಕಲಾ ಗ್ಯಾಲರಿಗೆ ಸೂಕ್ತ ಭೂಮಿ ನೀಡುವಂತೆ ಒತ್ತಾಯಿಸಲಾಗುವುದು. ದಲಿತ ಚಳವಳಿ ವಿಚಾರ ಬಂದಾಗ ಕೆ.ಟಿ.ಶಿವಪ್ರಸಾದ್ ಮತ್ತು ತ್ಯಾಗಿ ಅವರಂತಹ ಹೋರಾಟಗಾರರನ್ನು ದಲಿತ ಚಳವಳಿಯ ಇತಿಹಾಸ ಎಂದಿಗೂ ಮರೆಯುವುದಿಲ್ಲವೆಂದು ಹೇಳಿದರು.

ಕೆ.ಟಿ.ಶಿವಪ್ರಸಾದ್ ಅಂತಹ ಚಿಂತಕ ಹಾಗು ಕಲಾವಿದರನ್ನು ನಾವು ಕಳೆದುಕೊಂಡಿದ್ದೇವೆ. ಹುಟ್ಟು ದುಃಖದಿಂದ ಆರಂಭವಾಗಿ ಮಧ್ಯೆ ಅನಾರೋಗ್ಯದಲ್ಲಿ ಕೊನೆಗೆ ಮರಣ ಅನುಭವಿಸಲೇಬೇಕು. ಸಾವನ್ನು ಕೂಡ ಸಂಭ್ರಮಿಸುವ ಒಳ ಮನಸ್ಸು ಇಟ್ಟುಕೊಳ್ಳಬೇಕು. ದುಃಖ, ಹೋರಾಟ ಮತ್ತು ಅನಾರೋಗ್ಯದ ನಡುವೆಯೂ ಮೌಲ್ಯಯುತ ಬದುಕು ಕಟ್ಟಿಕೊಂಡ ಶಿವಪ್ರಸಾದ್ ಅವರ ಜೀವನವೇ ಸಮಾಜಕ್ಕೆ ಮಾದರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಹಸಿರುಭೂಮಿ ಪ್ರತಿಷ್ಠಾನದ ಸಂಸ್ಥಾಪಕ ಆರ್.ಪಿ.ವೆಂಕಟೇಶ್ ಮೂರ್ತಿ ಅವರು ಮಾತನಾಡಿ, ಅನ್ಯಾಯದ ವಿರುದ್ಧ ನಿರಂತರ ಹೋರಾಟ ನಡೆಸಿದ್ದ ಶಿವಪ್ರಸಾದ್ ಹಲವು ಜನಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದರು. ಗಡಿಪಾರು ಆದವರ ಪರವಾಗಿ ನಡೆಸಿದ ಹೋರಾಟ, ಜಪ್ತಿ ಪ್ರಕರಣಗಳ ವಿರುದ್ಧದ ಪ್ರತಿಭಟನೆಗಳು ಹಾಗು ಗಾಂಧಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳನ್ನು ಜನಸಾಮಾನ್ಯರ ಮನೆ ಮನೆಗೆ ತಲುಪಿಸುವ ಪ್ರಯತ್ನಗಳು ಅವರ ಸಮಾಜಮುಖಿ ವ್ಯಕ್ತಿತ್ವಕ್ಕೆ ಸಾಕ್ಷಿ ಎಂದು ಹೇಳಿದರು.

ಅಂತರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್, ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್, ಕೆ.ಟಿ.ಶಿವಪ್ರಸಾದ್ ಅವರ ಪತ್ನಿ ಸಿ. ಸುವರ್ಣ, ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಜಿ.ಎಲ್. ಮುದ್ದೇಗೌಡ, ನಾರಾಯಣದಾಸ್, ಪಂಕಜ ಗೊರೂರು, ಶಂಕರೇಗೌಡ, ಚಿತ್ರಕಲಾವಿದ ಶಂಕರ್, ಮಾದಿಗ ದಂಡೋರ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಆರ್.ವಿಜಯಕುಮಾರ್, ಕೆ.ಟಿ. ಶಿವಪ್ರಸಾದ್ ಒಡನಾಡಿಗಳ ಬಳಗದ ಬಿ.ಎಸ್.ದೇಸಾಯಿ, ಎಂ. ಸೋಮಶೇಖರ್ ಮುಂತಾದವರು ಇದ್ದರು.

## ನಾಗಾಲ್ಯಾಂಡ್‌ನಲ್ಲಿ ಭೂಕುಸಿತ 8 ಜನರ ಸಾವು



• ಪ್ರಜೋದಯ ವರದಿ

**ಕೊಹಿಮಾ:** ನಾಗಾಲ್ಯಾಂಡ್‌ನ ಮೋನ್ ಜಿಲ್ಲೆಯಲ್ಲಿ ಭಾನುವಾರ ಸುರಿದ ಧಾರಾಕಾರ ಮಳೆಗೆ ಭೂಕುಸಿತ, ಹಠಾತ್ ಪ್ರವಾಹ ಉಂಟಾಗಿದ್ದು, ಮಕ್ಕಳು ಸೇರಿ ಎಂಟು ಜನರು ಮೃತಪಟ್ಟಿದ್ದಾರೆ.

ಸದ್ಯ ಅವಶೇಷಗಳಡಿಯಿಂದ ನಾಲ್ಕು ಮೃತದೇಹಗಳನ್ನು ಹೊರತೆಗೆಯಲಾಗಿದ್ದು, ಉಳಿದವರ ಪತ್ತೆಗೆ ರಕ್ಷಣಾ ಕಾರ್ಯಾಚರಣೆ ತೀವ್ರ ಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದುರಂತದಲ್ಲಿ ಎಂಟು ಮಂದಿ ಸಾವನ್ನಪ್ಪಿದ್ದಾರೆ. ಅವಶೇಷಗಳ ಅಡಿಯಿಂದ ಸದ್ಯಕ್ಕೆ ನಾಲ್ಕು ಮೃತದೇಹಗಳನ್ನು ಹೊರತೆಗೆಯಲು ಸಾಧ್ಯವಾಗಿದ್ದು ನಾಪತ್ತೆಯಾದವರಿಗಾಗಿ ಇಡೀ ಪ್ರದೇಶ ದಲ್ಲಿ ತೀವ್ರ ಹುಡುಕಾಟ ನಡೆಸಲಾಗುತ್ತಿದೆಂದು ಜಿಲ್ಲಾಧಿಕಾರಿ ವೆನ್ಯೆ ಕೊನ್ಯಾಕ್ ತಿಳಿಸಿದ್ದಾರೆ.

# ಸಹಕಾರ ಸಂಘಗಳ ಪ್ರಗತಿಗೆ ಪಾರದರ್ಶಕತೆ ಮುಖ್ಯ

• ಪ್ರಜೋದಯ ವರದಿ




**ಹಾಸನ:** ಸಹಕಾರ ಸಂಘಗಳು ಪ್ರಗತಿ ಸಾಧಿಸಬೇಕೆಂದರೆ ಪಾರದರ್ಶಕತೆ, ಸದಸ್ಯರ ಸಹಕಾರ ಹಾಗು ಕಾಳಜಿ ಮುಖ್ಯವೆಂದು ಚಿಂತಕ ಬೆಳ್ಳುಚಿಕ್ಕಿ ವಿರೇಂದ್ರ ಅವರು ಹೇಳಿದರು.

ನಗರದ ಜಿಲ್ಲಾ ಕುರುಹಿನಶೆಟ್ಟಿ ಭವನದಲ್ಲಿ ಭಾನುವಾರ ನಡೆದ ನೇಕಾರ ಕುರುಹಿನಶೆಟ್ಟಿ ಪತ್ತಿನ ಸಹಕಾರ ಸಂಘದ 13ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಪ್ರತಿಭಾನ್ವಿತ ವಿದ್ಯಾರ್ಥಿಗಳ ಸನ್ಮಾನ ಹಾಗು ಆರೋಗ್ಯ ಉಚಿತ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿ, ಸದಸ್ಯರ ಹಣಕ್ಕೆ ಭದ್ರತೆ ನೀಡಿ, ಜನಸ್ನೇಹಿ ಹಣಕಾಸು ಸೇವೆಗಳನ್ನು ಒದಗಿಸುತ್ತಿರುವ ಸಹಕಾರ ಸಂಸ್ಥೆಗಳೇ ಸಮಾಜಕ್ಕೆ ಮಾದರಿ ಎಂದರು.

ಸಹಕಾರ ಕ್ಷೇತ್ರವು ಸಾಮಾನ್ಯ ಜನರ ಬದುಕಿನ ಆಧಾರಸ್ತಂಭ. ಅದರ ಮೇಲೆ ನಂಬಿಕೆಯನ್ನು ಉಳಿಸಿಕೊಳ್ಳುವುದು ಆಡಳಿತ ಮಂಡಳಿಯ ಪ್ರಮುಖ ಜವಾಬ್ದಾರಿ. ಕಳೆದ ಕೆಲವು ವರ್ಷಗಳಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಹಲವು ಸಹಕಾರ ಬ್ಯಾಂಕ್‌ಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಬಾಗಿಲು ಮುಚ್ಚಿವೆ. ಬೆಂಗಳೂರಿನಲ್ಲೇ ಕಳೆದ ವರ್ಷ ಸುಮಾರು 18 ಸಹಕಾರ ಬ್ಯಾಂಕ್‌ಗಳು ಮುಚ್ಚಿದ ಪರಿಣಾಮ ಸಾವಿರಾರು ಠೇವಣಿದಾರರು ಸಂಕಷ್ಟ ಅನುಭವಿಸಿದರು. ಬಸವನಗುಡಿಯ ಸಹಕಾರ ಬ್ಯಾಂಕ್‌ನಲ್ಲಿ ಜೀವಮಾನವಿಡೀ ಕೂಡಿಟ್ಟ ಹಣ ಕಳೆದುಕೊಂಡು ಕೆಲವರು ಆತ್ಮಹತ್ಯೆ ಮಾಡಿಕೊಂಡ ಕಹಿ ನೆನಪು ಇನ್ನೂ ಮಾಸಿಲ್ಲವೆಂದರು.

ಜಿಲ್ಲಾ ಕುರುಹಿನಶೆಟ್ಟಿ ಸಂಘದ ಅಧ್ಯಕ್ಷ ಕೆ.ಸಿ.ಕೃಷ್ಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ವಾರ್ಷಿಕ ವರದಿ ಮಂಡಿಸಲಾಯಿತು. 2025-26ನೇ ಸಾಲಿನಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗು ವಿವಿಧ ವೃತ್ತಿಪರ ಕೋರ್ಸ್‌ಗಳಲ್ಲಿ ಉತ್ತಮ ಸಾಧನೆ ಮಾಡಿದ 27 ವಿದ್ಯಾರ್ಥಿಗಳಿಗೆ ಅಭಿನಂದಿಸಲಾಯಿತು. ಇಂಡಿಯಾನಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗ ದಲ್ಲಿ ಆರೋಗ್ಯ ಉಚಿತ ತಪಾಸಣಾ ಶಿಬಿರ ನಡೆಯಿತು.

ಹಾಸನಾಂಬ ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಕೆ.ಮೋಹನ್ ಕುಮಾರ್, ಕಾರ್ಯದರ್ಶಿ ಹರೀಶ್ ಕುಮಾರ್, ರಾಜೇಗೌಡ, ಲಕ್ಷ್ಮಮ್ಮ, ಸಂಘದ ಉಪಾಧ್ಯಕ್ಷ ಎಸ್.ವಿ.ಚಂದ್ರಶೇಖರ್, ಕಾರ್ಯದರ್ಶಿ ಎ.ಬಿ.ಹರ್ಷಿಣಿ, ಹಾಸನಾಂಬ ಲಯನ್ಸ್ ಕ್ಲಬ್ ವಲಯ ಅಧ್ಯಕ್ಷ ತಿಮ್ಮರಾಯಶೆಟ್ಟಿ, ಕೆ.ಹೆಚ್. ನಾರಾಯಣಶೆಟ್ಟಿ, ಹೆಚ್.ವಿ. ಬಾಲಕೃಷ್ಣ, ಹೆಚ್.ಚಂದ್ರಶೇಖರ್, ಹೆಚ್.ಎಸ್.ಹೇಮಂತ್ ಕುಮಾರ್, ಪ್ರೇಮಮ್ಮ, ಎಲ್.ಕೃಷ್ಣಶೆಟ್ಟಿ, ಜಿ.ಸಿ. ನಟರಾಜು ಇತರರಿದ್ದರು.

## ಡಕೆಟ್ ಶತಕ: ಭಾರತಕ್ಕೆ ಬೃಹತ್ ಗುರಿ

**ಲಂಡನ್:** ಆತಿಥೇಯ ಇಂಗ್ಲೆಂಡ್ ಮತ್ತು ಭಾರತ ನಡುವಿನ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್, ಭಾರತಕ್ಕೆ ಗೆಲ್ಲಲು 388 ರನ್‌ಗಳ ಬೃಹತ್ ಗುರಿ ನೀಡಿದೆ. ಆರಂಭಿಕ ಆಟಗಾರ ಬೆನ್ ಡಕೆಟ್ ಅವರ ಸ್ಫೋಟಕ ಶತಕ, ಜೋ ರೂಟ್ ಮತ್ತು ಬೆಥೆಲ್ ಅವರ ಆಕರ್ಷಕ ಅರ್ಧಶತಕಗಳ ನೆರವಿನಿಂದ ಇಂಗ್ಲೆಂಡ್ ರನ್‌ಗಳ ಶಿಖರವನ್ನೇ ಸೃಷ್ಟಿಸಿದೆ.


ಇನ್ನಿಂಗ್ ಆರಂಭದಿಂದಲೂ ಭಾರತದ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿದ ಆರಂಭಿಕ ಆಟಗಾರ ಬೆನ್ ಡಕೆಟ್ 141 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಗಟ್ಟಿ ಬುನಾದಿ ಹಾಕಿಕೊಟ್ಟರು. ಅವರ ಬ್ಯಾಟಿಂಗ್ ಮುಂದೆ ಭಾರತದ ಬೌಲರ್‌ಗಳ ತಂತ್ರಗಾರಿಕೆ ಫಲ ನೀಡಲಿಲ್ಲ.

ಡಕೆಟ್‌ಗೆ ಉತ್ತಮ ಸಾಥ್ ನೀಡಿದ ಅನುಭವಿ ಬ್ಯಾಟರ್ ಜೋ ರೂಟ್ 74 ರನ್ ಗಳಿಸಿ ಅಜೇಯರಾಗುಳಿದರು. ಯುವ ಆಟಗಾರ ಬೆಥೆಲ್ ಸ್ಫೋಟಕ ಬ್ಯಾಟಿಂಗ್ ನಡೆಸಿ 9 ರನ್‌ಗಳಿಂದ ಶತಕ ವಂಚಿತರಾಗಿ ವಿಕೆಟ್ ಒಪ್ಪಿಸಿದರು. ಭಾರತದ ಪರ ಕನ್ನಡಿಗ ಪ್ರಸಿದ್ಧ ಕೃಷ್ಣ 2, ಪ್ರಿನ್ಸ್ ಯಾದವ್ 1 ವಿಕೆಟ್ ಪಡೆದರು.

# ಜಮ್ಮುವಿನಲ್ಲಿ ಭೂಕುಸಿತ, ಪ್ರವಾಹ

## ಪೂಂಚ್-ರಾಜೌರಿಯಲ್ಲಿ 11 ಜನ, ಹಲವರು ನಾಪತ್ತೆ

• ಪ್ರಜೋದಯ ವರದಿ



**ಜಮ್ಮು:** ಜಮ್ಮು ಮತ್ತು ಕಾಶ್ಮೀರದ ಗಡಿ ಜಿಲ್ಲೆಗಳಾದ ಪೂಂಚ್ ಮತ್ತು ರಾಜೌರಿಯಲ್ಲಿ ಭಾನುವಾರ ಸುರಿದ ಧಾರಾಕಾರ ಮಳೆಯಿಂದ ಭೂಕುಸಿತ ಹಾಗೂ ಪ್ರವಾಹ ಉಂಟಾಗಿದ್ದು 11 ಜನರು ಸಾವನ್ನಪ್ಪಿದ್ದು, ಏಳು ಮಂದಿ ನಾಪತ್ತೆಯಾಗಿದ್ದಾರೆ.

ಪರಿಸ್ಥಿತಿಯನ್ನು ನಿಯಂತ್ರಿಸಲು ಅಗ್ನಿ ಶಾಮಕ ಸಿಬ್ಬಂದಿ, ಎನ್‌ಡಿಆರ್‌ಎಫ್ ಹಾಗೂ ರಕ್ಷಣಾ ಪಡೆಗಳು ಜಂಟಿಯಾಗಿ ನಾಪತ್ತೆಯಾದವರ ಪತ್ತೆಗೆ ತೀವ್ರ ಹುಡುಕಾಟ ನಡೆಸುತ್ತಿವೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾಂಗ್ಲಾ ಗ್ರಾಮದಲ್ಲಿ ಪ್ರವಾಹಕ್ಕೆ ಮನೆ ಯೊಂದು ಕೊಚ್ಚಿ ಹೋಗಿದ್ದು ಒಂದೇ ಕುಟುಂಬದ ನಾಲ್ವರು ನಾಪತ್ತೆಯಾಗಿದ್ದಾರೆ. ಮುರ್ರಾ ಗ್ರಾಮದಲ್ಲಿ ಭೂಕುಸಿತಕ್ಕೆ ಮನೆ ಯೊಂದು ಸಂಪೂರ್ಣ ಹೂತು ಹೋಗಿದ್ದು ಮನೆಯಲ್ಲಿದ್ದ ಎಂಟೂ ಜನ ಅವಶೇಷಗಳಡಿ ಸಿಲುಕಿದ್ದಾರೆ. ಅವರಲ್ಲಿ 2 ವರ್ಷದ ಮಗು ಸೇರಿ ಐವರ ಮೃತದೇಹಗಳನ್ನು ಹೊರತೆಗೆಯಲಾಗಿದ್ದು, ಉಳಿದವರಿಗಾಗಿ ಹುಡುಕಾಟ ಮುಂದುವರಿದಿದೆ.

**ದೆಹಲಿ ಪ್ರವಾಸ ಮೊಟಕು**

ರಾಜ್ಯದಲ್ಲಿ ಮಳೆ ಪ್ರವಾಹ ಮತ್ತು ಭೂಕುಸಿತದ ಪರಿಣಾಮ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ರಾಜ್ಯದ ಸ್ಥಾನಮಾನ ಕ್ಕಾಗಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಲು ಕೈಗೊಂಡಿದ್ದ ದೆಹಲಿ ಪ್ರವಾ ಸವನ್ನು ಅರ್ಧಕ್ಕೆ ಮೊಟಕುಗೊಳಿಸಿ ಮಧ್ಯಾಹ್ನವೇ ಜಮ್ಮುಗೆ ಮರಳಿದ್ದಾರೆ.

ಮತ್ತೊಂದೆಡೆ, ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಪ್ರವಾಹ ಪೀಡಿತ ಜಿಲ್ಲೆಗಳ ಪರಿಸ್ಥಿತಿಯನ್ನು ಪರಿಶೀಲಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ತಕ್ಷಣ ಪರಿಹಾರ ಮತ್ತು ನೆರವು ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

**ಜುಲೈ 23ರವರೆಗೆ ಭಾರೀ ಮಳೆ ಮುನ್ನೆಚ್ಚರಿಕೆ**

ಜಮ್ಮು ಮತ್ತು ಕಾಶ್ಮೀರದಲ್ಲಿ ಜುಲೈ 23ರವರೆಗೆ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

## ಮಾಜಿ ಸಚಿವ ಶ್ರೀಕಂಠಯ್ಯ ಜನ್ಮ ಶತಮಾನೋತ್ಸವ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಮಾಜಿ ಸಚಿವ, ದಿ|| ಹೆಚ್.ಸಿ. ಶ್ರೀಕಂಠಯ್ಯ ಅವರ ಜನ್ಮ ಶತಮಾನೋತ್ಸವವನ್ನು ಅವರ ಅಭಿಮಾನಿಗಳು, ಕುಟುಂಬ ಸದಸ್ಯರು ಆಚರಿಸಿದರು.

ಪಟ್ಟಣದ 200 ಪೌರ ಕಾರ್ಮಿಕರು, ಕಸಬಾ ಹೋಬಳಿ ವ್ಯಾಪ್ತಿಯ ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೆ ಪಟ್ಟಣದ ಹೆಚ್.ಸಿ.ಶ್ರೀಕಂಠಯ್ಯ ಸಭಾಂಗಣದಲ್ಲಿ ವಸ್ತ್ರ ವಿತರಿಸಿ ಸಿಹಿ ಹಂಚಿಕೆ ಮಾಡಲಾಯಿತು. ಶ್ರೀಕಂಠಯ್ಯನವರ ಹುಟ್ಟು ಹಬ್ಬದ ಸಲುವಾಗಿ ಬೃಹತ್ ಕೇಕ್ ಕತ್ತರಿಸಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಕರ್ನಾಟಕ ವಿದ್ಯುಚ್ಛಕ್ತಿ ಕಾರ್ಖಾನೆ ಅಧ್ಯಕ್ಷ ಹೆಚ್.ಸಿ.ಲಲಿತ್ ರಾಘವ್ ಅವರು ಮಾತನಾಡಿ, ನಮ್ಮ ತಾತನವರ 100ನೇ ಹುಟ್ಟುಹಬ್ಬವನ್ನು ಚಿರಸ್ಮರಣೆಯಾಗಿಸಬೇಕೆಂಬ ಉದ್ದೇಶದಿಂದ ಹೆಚ್.ಸಿ.ಶ್ರೀಕಂಠಯ್ಯ ಸೇವಾ ಸಮಿತಿ ವತಿಯಿಂದ ಹಲವು ಕಾರ್ಯಕ್ರಮ ರೂಪಿಸಲಾಗಿದೆ. ತಾಲ್ಲೂಕಿನ ವಿದ್ಯಾವಂತ ಯುವಕರಿಗೆ ಕೌಶಲ್ಯ ಕಲಿಸುವ ನಿಟ್ಟಿನಲ್ಲಿ ಬಾಲ್ಕ್ ಸಂಸ್ಥೆಯ ಸಹಯೋಗದಲ್ಲಿ ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್, ವ್ಯಕ್ತಿತ್ವ ವಿಕಸನ ಕಾರ್ಯಾಗಾರ, ಕ್ರೀಡೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಷ್ಟ್ರ ಮಟ್ಟದ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿತ್ತು ಎಂದರು.

ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಅವರು ಮಾತನಾಡಿ, ಒಬ್ಬ ಮನುಷ್ಯ ನಮ್ಮ ಮಧ್ಯೆ ಇಲ್ಲದಾಗ ಅವರ ಮೌಲ್ಯ ತಿಳಿಯುತ್ತದೆ. ಜಿಲ್ಲೆಯ ಅಭಿವೃದ್ಧಿಯಲ್ಲಿ ಶ್ರೀಕಂಠಯ್ಯನವರ ಕೊಡುಗೆ ಅಪಾರವಾಗಿದೆ. ಅವರ ಸಾಧನೆಗಳನ್ನು ತಾಲ್ಲೂಕಿನ ಜನರು ಎಂದಿಗೂ ಮರೆಯ ಬಾರದು. ಇಂದಿನ ಯುವಕರಿಗೆ ಶ್ರೀಕಂಠಯ್ಯ ನವರ ಕೊಡುಗೆ ಏನೆಂಬುದನ್ನು ಅವರ ಮೊಮ್ಮಕ್ಕಳಾದ ಲಲಿತ್ ರಾಘವ್, ನವನೀಶ್ ತೋರಿಸುತ್ತಿದ್ದಾರೆ. ಯುವ ರಾಜಕಾರಣಿಯಾಗಿರುವ ಲಲಿತ್‌ರಾಘವ್ ತಮ್ಮ ತಾತನ ಆದರ್ಶಗಳನ್ನು, ಜನಪರ ಕಾಳಜಿಯನ್ನು ಬೆಳೆಸಿಕೊಂಡು ರಾಜಕೀಯದಲ್ಲಿ ಏಳಿಗೆ ಸಾಧಿಸಬೇಕೆಂದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಶಂಕರ್, ಮುಖಂಡರಾದ ಜಿ.ಆರ್.ಮೂರ್ತಿ, ಮಹೇಶ್ ಕಬ್ಬಾಳು, ಉಮಾಶಂಕರ್, ಗಿರೀಶ್, ಗೌಡಗೆರೆ ಕೇಶವಣ್ಣ ಮತ್ತಿತರರಿದ್ದರು.

# ಚನ್ನಮ್ಮರ ಸರಳತೆ, ಕುಟುಂಬ ಮೌಲ್ಯಗಳು ಸದಾ ಸ್ಫೂರ್ತಿದಾಯಕ

• ಪ್ರಜೋದಯ ವರದಿ



**ಬೇಲೂರು:** ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಧರ್ಮಪತ್ನಿ ದಿ|| ಚನ್ನಮ್ಮ ದೇವೇಗೌಡ ಅವರ ಸರಳತೆ, ಕುಟುಂಬದ ಮೇಲಿನ ಅಪಾರ ಕಾಳಜಿ, ತ್ಯಾಗ ಮತ್ತು ಮಾನವೀಯ ಮೌಲ್ಯಗಳು ಸದಾ ಸಮಾಜಕ್ಕೆ ಸ್ಫೂರ್ತಿಯಾಗಿರಲಿವೆ ಎಂದು ರೋಟರಿ ಕ್ಲಬ್ ಅಧ್ಯಕ್ಷ ಬಿ.ಬಿ.ಶಿವರಾಜು ಅವರು ಹೇಳಿದರು.

ಪಟ್ಟಣದ ರೋಟರಿ ಕ್ಲಬ್ ವತಿಯಿಂದ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ದೇವೇಗೌಡ ಅವರ ಸುದೀರ್ಘ ರಾಜಕೀಯ ಪಯಣದಲ್ಲಿ ಚೆನ್ನಮ್ಮ ಅವರು ಮೌನ ಶಕ್ತಿಯಾಗಿ, ನೆರಳಿನಂತೆ ಜೊತೆಯಾಗಿ ನಿಂತು ಕುಟುಂಬದ ಎಲ್ಲಾ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿದರು. ದೇವೇಗೌಡ ಅವರು ದೇಶದ ಅತ್ಯುನ್ನತ ಹುದ್ದೆಯನ್ನು ಅಲಂಕರಿಸುವ ಮಟ್ಟಕ್ಕೆ ಬೆಳೆಯಲು ಅವರ ತ್ಯಾಗ, ಸಹಕಾರ ಮತ್ತು ಕುಟುಂಬ ನಿರ್ವಹಣೆ ಮಹತ್ವದ ಪಾತ್ರ ವಹಿಸಿತು ಎಂದು ಹೇಳಿದರು.

ಪಕ್ಷದ ಬೆಳವಣಿಗೆ ಹಾಗೂ ದೇವೇಗೌಡರ ರಾಜಕೀಯ ಬದುಕಿನ ಹಿಂದೆ ಕುಟುಂಬದ ಒಗ್ಗಟ್ಟು, ಶಿಸ್ತು ಮತ್ತು ಸಂಸ್ಕಾರದ ಬಲವಿದ್ದು, ಅದರ ಬೆನ್ನೆಲುಬಾಗಿ ಚನ್ನಮ್ಮ ಅವರು ಪ್ರೀತಿ, ಸಹನೆ, ಕಾಳಜಿ ಮತ್ತು ಮೌಲ್ಯಗಳ ಮೂಲಕ ಕುಟುಂಬವನ್ನು ಒಗ್ಗೂಡಿಸಿ ಆದರ್ಶ ಗೃಹಿಣಿಯಾಗಿ ಬದುಕಿದವರೆಂದು ಬಣ್ಣಿಸಿದರು.

ಅಧಿಕಾರದ ಆಡಂಬರದಿಂದ ದೂರವಿದ್ದು, ಸರಳ ಜೀವನ ನಡೆಸಿದ ಚನ್ನಮ್ಮ ಅವರು ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಆತ್ಮೀಯವಾಗಿ ಬೆರೆಯುತ್ತಿದ್ದರು. ಅವರ ವ್ಯಕ್ತಿತ್ವ ಮಹಿಳೆಯರಿಗೆ, ಕುಟುಂಬಗಳಿಗೆ ಮತ್ತು ಸಮಾಜಕ್ಕೆ ಆದರ್ಶಪ್ರಾಯವಾಗಿದೆ. ಅವರ ಜೀವನವು ಕುಟುಂಬದ ಏಕತೆ, ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳ ಮಹತ್ವವನ್ನು ಸಾರುತ್ತದೆಂದರು.

ರೋಟರಿ ಕ್ಲಬ್ ಝೋನ್-8ರ ಸಹಾಯಕ ಗವರ್ನರ್ ಡಾ.ಎಸ್.ಗಣೇಶ್ ಅವರು ಮಾತನಾಡಿ, ಚನ್ನಮ್ಮ ದೇವೇಗೌಡ ಅವರು ಗ್ರಾಮೀಣ ಮಹಿಳೆಯರಿಗೆ ಶಕ್ತಿಯ ಸಂಕೇತ ಹಾಗೂ ಸ್ಫೂರ್ತಿಯ ಚಿಲುಮೆಯಾಗಿದ್ದರು. ದೇಶದ ಪ್ರಮುಖ ರಾಜಕೀಯ ಕುಟುಂಬದ ಒಡತಿಯಾಗಿದ್ದರೂ ಸರಳತೆ, ಸಂಸ್ಕಾರ ಮತ್ತು ಕುಟುಂಬ ಮೌಲ್ಯಗಳನ್ನು ಉಳಿಸಿಕೊಂಡು ಬದುಕಿದ ಅವರು ಸಮಾಜಕ್ಕೆ ಮಾದರಿಯಾಗಿ ದ್ದಾರೆಂದರು.

ಚನ್ನಮ್ಮ ದೇವೇಗೌಡ ಅವರ ಅಗಲಿಕೆ ದೇವೇಗೌಡ ಕುಟುಂಬಕ್ಕೆ ಮಾತ್ರವಲ್ಲ, ರಾಜ್ಯದ ಸಾರ್ವಜನಿಕ ಜೀವನಕ್ಕೂ ಹಾಗೂ ಅವರನ್ನು ಗೌರವಿಸುತ್ತಿದ್ದ ಲಕ್ಷಾಂತರ ಜನರಿಗೆ ತುಂಬಲಾರದ ನಷ್ಟವಾಗಿದೆ. ಭಗವಂತನು ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಹಾಗೂ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಪ್ರಾರ್ಥಿಸಿದರು.

ಸಭೆಯಲ್ಲಿ ದಿ|| ಚನ್ನಮ್ಮ ದೇವೇಗೌಡ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಎರಡು ನಿಮಿಷಗಳ ಮೌನಾಚರಣೆ ಮೂಲಕ ಗೌರವ ನಮನ ಸಲ್ಲಿಸಲಾಯಿತು. ಸದಸ್ಯರು ಅವರ ಆದರ್ಶಮಯ ಜೀವನ, ಸರಳತೆ, ತ್ಯಾಗ ಹಾಗೂ ಕುಟುಂಬದ ಮೇಲಿನ ಬದ್ಧತೆಯನ್ನು ಸ್ಮರಿಸಿದರು.

ರೋಟರಿ ಕ್ಲಬ್ ಕಾರ್ಯದರ್ಶಿ ರೋ. ರಾಘವೇಂದ್ರ, ಸದಸ್ಯರಾದ ರೋ.ವಿನೋದ್ ಚೌಡ, ರೋ.ಬಿ.ಎಲ್.ರಾಜೇಗೌಡ, ರೋ. ಯೋಗೇಶ್‌ಗೌಡ, ರೋ.ಶಂಭುಗೌಡ, ರೋ. ರೇವಣ್ಣಗೌಡ, ಮೋಹನ್ ಕುಮಾರ್ ಉಪಸ್ಥಿತರಿದ್ದರು.

## ಫಿಫಾ ವಿಶ್ವಕಪ್ ಫೈನಲ್: ಕೇರಳ ಶಾಲಾ-ಕಾಲೇಜುಗಳಿಗೆ ಸೋಮವಾರ ರಜೆ

• ಪ್ರಜೋದಯ ವರದಿ

**ತಿರುವನಂತಪುರಂ:** ರಾಜ್ಯದ ಎಲ್ಲಾ ಶಾಲಾ-ಕಾಲೇಜುಗಳಿಗೆ ಫಿಫಾ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದ ಮರುದಿನ (ಸೋಮವಾರ) ರಜೆ ಘೋಷಿಸಲಾಗಿದೆ.

ನ್ಯೂಯಾರ್ಕ್‌ನಲ್ಲಿ ಇಂದು (ಭಾನುವಾರ) ತಡರಾತ್ರಿ ಫೈನಲ್ ಪಂದ್ಯ ನಡೆಯಲಿದೆ. ಹಾಲಿ ಚಾಂಪಿಯನ್ ಅರ್ಜೆಂಟೀನಾ ಮತ್ತು ಸ್ಪೇನ್ ತಂಡಗಳು ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿವೆ. ಪಂದ್ಯ ವೀಕ್ಷಿಸುವ ವಿದ್ಯಾರ್ಥಿಗಳ ಮನವಿಯನ್ನು ಗಮನದಲ್ಲಿರಿಸಿಕೊಂಡು ರಜೆ ಘೋಷಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಈ ನಿರ್ಧಾರದ ಕುರಿತು ಶಿಕ್ಷಣ ಸಚಿವ ಎನ್.ಶಂಸುದ್ದೀನ್ ಅವರು ಸಾಮಾಜಿಕ ಮಾಧ್ಯಮ ಗಳಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

# ಪೂರ್ಣಗೊಳ್ಳದ ಸಕಲೇಶಪುರ ಬಸ್ ತಂಗುದಾಣ ಕಾಮಗಾರಿ

• ಪ್ರಜೋದಯ ವರದಿ



**ಸಕಲೇಶಪುರ :** ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ ಹೈಟೆಕ್ ಬಸ್ ತಂಗುದಾಣ ಕಾಮಗಾರಿ ಪೂರ್ಣಗೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಹಾಸನ ಮಾರ್ಗಕ್ಕೆ ಸಂಚರಿಸುವ ಪ್ರಯಾಣಿಕರಿಗೆ ಹಳೆಯ ಬಸ್ ನಿಲ್ದಾಣದಲ್ಲಿ ಸಮರ್ಪಕ ತಂಗುದಾಣ ಇಲ್ಲದ ಕಾರಣ ಹಲವು ವರ್ಷಗಳಿಂದ ಬಿಸಿಲು ಮತ್ತು ಮಳೆಯಲ್ಲಿ ನಿಂತು ಬಸ್‌ಗಾಗಿ ಕಾಯಬೇಕಾದ ಅನಿವಾರ್ಯ ಪರಿಸ್ಥಿತಿ ಇತ್ತು. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಶಾಸಕ ಸಿಮೆಂಟ್ ಮಂಜು ಅವರು ತಮ್ಮ ಪ್ರದೇಶಾಭಿವೃದ್ಧಿ ಅನುದಾನದಿಂದ ಸುಮಾರು 20 ಲ.ರೂ. ವೆಚ್ಚದಲ್ಲಿ ಹೈಟೆಕ್ ಬಸ್ ತಂಗುದಾಣ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದ್ದರು.

ಪ್ರಸ್ತುತ ಕಾಮಗಾರಿ ಶೇ.60ರಷ್ಟು ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಸಾರ್ವಜನಿಕರ ಬಳಕೆಗೆ ಲಭ್ಯವಾಗುವ ನಿರೀಕ್ಷೆ ಇತ್ತು. ಆದರೆ, ಇದೇ ಸಂದರ್ಭದಲ್ಲಿ ಕಾಮಗಾರಿಗೆ ಅಡ್ಡಿ ಉಂಟು ಮಾಡುವ ಪ್ರಯತ್ನಗಳು ನಡೆಯುತ್ತಿವೆ ಎಂಬ ಆರೋಪಗಳು ಕೇಳಿ ಬಂದಿವೆ.

ನಿರ್ಮಾಣ ನಡೆಯುತ್ತಿರುವ ಜಾಗವು ಸಬ್-ರಿಜಿಸ್ಟ್ರಾರ್ ಕಚೇರಿ ವ್ಯಾಪ್ತಿಗೆ ಸೇರಿದೆ ಎಂಬ ಕಾರಣವನ್ನು ಮುಂದಿಟ್ಟು, ಕೆಲವರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಒತ್ತಡ ಹೇರುವ ಮೂಲಕ ಕಾಮಗಾರಿ ಸ್ಥಗಿತಗೊಳಿಸಲು ಪ್ರಯತ್ನಿಸುತ್ತಿದ್ದಾರೆಂದು ಸಾರ್ವಜನಿಕರು ಆರೋಪಿಸಿದ್ದಾರೆ. ಈ ಬೆಳವಣಿಗೆ ಪ್ರಯಾಣಿಕರು ಹಾಗು ಸ್ಥಳೀಯರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಜನೋಪಯೋಗಿ ಕಾಮಗಾರಿಗಳನ್ನು ರಾಜಕೀಯ ದ್ವೇಷ ಅಥವಾ ಭಿನ್ನಾಭಿಪ್ರಾಯಗಳ ಕಾರಣಕ್ಕೆ ತಡೆಹಿಡಿಯುವುದು ಸರಿಯಲ್ಲ. ಸಾರ್ವಜನಿಕರ ಅನುಕೂಲವೇ ಮುಖ್ಯವಾಗಿದ್ದು, ಗೊಂದಲಗಳಿದ್ದರೆ ಸಂಬಂಧಪಟ್ಟ ಇಲಾಖೆಗಳು ಕಾನೂನುಬದ್ಧವಾಗಿ ಪರಿಷ್ಕರಿಸಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕಾಮಗಾರಿ ಸ್ಥಗಿತಕ್ಕೆ ಕಾರಣವಾದ ನಿಜವಾದ ಪರಿಸ್ಥಿತಿ ಏನು ಎಂಬುದರ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟನೆ ನೀಡಬೇಕೆಂಬ ಒತ್ತಾಯವೂ ಕೇಳಿ ಬಂದಿದೆ. ಜನರ ತೆರಿಗೆ ಹಣದಿಂದ ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾಮಗಾರಿ ರಾಜಕೀಯ ವಿವಾದಕ್ಕೆ ಬಲಿಯಾಗದೆ, ಶೀಘ್ರ ಪೂರ್ಣಗೊಂಡು ಸಾರ್ವಜನಿಕ ಸೇವೆಗೆ ಮುಕ್ತವಾಗಬೇಕೆಂಬುದು ಸಾರ್ವಜನಿಕರ ಆಶಯವಾಗಿದೆ.

ಈ ಕುರಿತು ಶಾಸಕ ಸಿಮೆಂಟ್ ಮಂಜು ಅವರು ಪ್ರತಿಕ್ರಿಯಿಸಿ, ಹಲವಾರು ವರ್ಷಗಳಿಂದ ಬಸ್ ನಿಲ್ದಾಣದ ಕೊರತೆಯಿಂದ ಸಾರ್ವಜನಿಕರು ಮಳೆ, ಗಾಳಿ ಹಾಗು ಬಿಸಿಲಿನ ನಡುವೆಯೇ ಬಸ್‌ಗಾಗಿ ಕಾಯುವ ಅನಿವಾರ್ಯ ಪರಿಸ್ಥಿತಿ ಎದುರಿಸುತ್ತಿದ್ದರು. ಜನರ ಈ ಸಂಕಷ್ಟವನ್ನು ಮನಗಂಡು ಆಧುನಿಕ ಸೌಲಭ್ಯಗಳಿರುವ ಹೈಟೆಕ್ ತಂಗುದಾಣ ನಿರ್ಮಾಣದ ಯೋಜನೆ ರೂಪಿಸಿ ಕಾಮಗಾರಿ ಆರಂಭಿಸಲಾಗಿದೆ. ಆದರೆ, ಕೆಲವರು ಕಾಮಗಾರಿಗೆ ಅಡ್ಡಿಪಡಿಸುತ್ತಿರುವುದು ಬೇಸರ ತರಿಸಿದೆ ಎಂದರು.

ನಾನು ಕ್ಷೇತ್ರದ ಜನರ ಧ್ವನಿಯಾಗಿ ಕೆಲಸ ಮಾಡುತ್ತಿದ್ದೇನೆ. ಸಾರ್ವಜನಿಕರ ಹಿತವೇ ನನ್ನ ಮೊದಲ ಆದ್ಯತೆ. ಹೈಟೆಕ್ ತಂಗುದಾಣ ನಿರ್ಮಾಣದ ವಿಚಾರದಲ್ಲಿ ನಾನು ಸಂಪೂರ್ಣ ಬದ್ಧನಾಗಿದ್ದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಗೊಂದಲಕ್ಕೆ ಅವಕಾಶ ನೀಡದೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದರು.

## ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ : ಬೈಕ್ ಸವಾರ ಸಾವು



• ಪ್ರಜೋದಯ ವರದಿ

**ಆಲೂರು:** ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಪಟ್ಟಣ ಸಮೀಪ ನಡೆದಿದೆ.

ಅಬ್ಬನ ಗ್ರಾಮದ ಹರೀಶ್ (45) ಮೃತರು. ಮನೆಗೆ ದಿನಸಿ ಸಾಮಾಗ್ರಿ ತರಲು ಪಟ್ಟಣಕ್ಕೆ ಬಂದಿದ್ದ ಅವರು ವಾಪಾಸ್ ಹೋಗುತ್ತಿದ್ದಾಗ ಆಲೂರು-ಬೈರಾಪುರ ರಸ್ತೆಯ ಬಸವೇಶ್ವರ ಶಾಲೆಯ ಮುಂಭಾಗ ಹಾಸನ ಕಡೆಯಿಂದ ವೇಗವಾಗಿ ಬಂದ ಸಾರಿಗೆ ಬಸ್ ಬೈಕ್‌ಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಬೈಕ್‌ನ್ನು ಎಡಕ್ಕೆ ತಿರುಗಿಸಿದ ಪರಿಣಾಮ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ ರಾಜು ಎಂಬುವವರಿಗೆ ಡಿಕ್ಕಿಯಾಗಿ ಗಂಭೀರ ಗಾಯಗೊಂಡಿದ್ದಾರೆ. ಬೈಕ್ ಸಮೇತ ರಸ್ತೆ ಮೇಲೆ ಬಿದ್ದಿದ್ದರಿಂದ ಹರೀಶ್‌ಗೆ ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶ್ರದ್ಧಾಂಜಲಿ

ಆಸ್ತಾಂ ತಾವದಿಯಂ ಪ್ರಸೂತಿ ಸಮಯೇ ದುರ್ವಾರಶೂಲವ್ಯಥಾ
ನೈರುಜ್ಯಂ ತನುಶೋಷಣಂ ಮಲಮಯೀ ಶಯ್ಯಾ ಚ ಸಾಂವತ್ಸರೀ ।
ಏಕಸ್ಯಾಪಿ ನ ಗರ್ಭಭಾರಭರಣ ಕ್ಲೇಶಸ್ಯ ಯಸ್ಯ ಕ್ಷಮಃ
ದಾತುಂ ನಿಷ್ಕೃತಿಮುನ್ನತೋಽಪಿ ತನಯಸ್ತಸ್ಯೈ ಜನನ್ಯೈ ನಮಃ ॥
–ಶ್ರೀ ಆದಿಶಂಕರಾಚಾರ್ಯರು

**ತಾತ್ಪರ್ಯ :**
ತಾಯಿಯು ಮಗುವನ್ನು ಹೆರುವಾಗ ಪಡುವ ಯಾತನೆಯು ಅಸಹನೀಯ. ಅವಳು ಮಗುವಿನ ಪೋಷಣೆಯಲ್ಲಿ ಅನಾರೋಗ್ಯಕ್ಕೆ ಈಡಾಗುವುದು, ಮಗುವಿನ ಮಲಮೂತ್ರಾದಿಗಳನ್ನು ಬಳಿದು ಹಾಕುವುದು, ವರ್ಷಾನುಕಾಲ ಉಣ್ಣುವ ಕಷ್ಟಗಳನ್ನು ನೆನಪಿಸಿಕೊಂಡರೆ, ಆಕೆಯ ಋಣವನ್ನು ತೀರಿಸಲು ಈ ಜನ್ಮ ಸಾಲದು.



## ಅನ್ನಪೂರ್ಣೇಶ್ವರಿ

## ಶ್ರೀಮತಿ ಚನ್ನಮ್ಮ ದೇವೇಗೌಡ ರವರು

(ಜನನ: ಜೂನ್ 1937 | ಮರಣ: 18 ಜುಲೈ 2026)

ಸಹೋದರಿ, ಧರ್ಮಪತ್ನಿ, ತಾಯಿಯಾಗಿ ಎಲ್ಲಾ ಜವಾಬ್ದಾರಿಗಳನ್ನು ಸಾರ್ಥಕವಾಗಿ ಪೂರೈಸಿದ ನೀವು ಮಮತಾಮಯಿ, ಕರುಣಾಮಯಿ ಆಗಿದ್ದಿರಿ. ಮನೆ ಬಾಗಿಲಿಗೆ ಬಂದವರನ್ನು ಮಕ್ಕಳಂತೆ ಸಲುಹಿದ ಮಹಾತಾಯಿ.
ಇಡೀ ಬದುಕನ್ನು ನಿಸ್ವಾರ್ಥವಾಗಿ ಸವೆಸಿ ಶಿವೈಕ್ಯರಾದ ನಿಮ್ಮ ಅಗಲಿಕೆ ನಮಗೆಲ್ಲರಿಗೂ ಅತೀವ ದುಃಖ ಉಂಟು ಮಾಡಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಆ ಭಗವಂತನಲ್ಲಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತ : ಶ್ರೀ ಹೆಚ್.ಡಿ. ದೇವೇಗೌಡರ ಕುಟುಂಬ ಮತ್ತು ಅಭಿಮಾನಿಗಳು

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019